MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com Yuva Marga yuva_marga_

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 58 | ಗುರುವಾರ : 18-12-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 05 | ISSUE: 58 | THURSDAY : 18-12-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ವಿಧಾನಸಭೆಯಲ್ಲಿ ಗೃಹಲಕ್ಷ್ಮಿ ಗದ್ದಲ ಸಭಾತ್ಯಾಗ



**ಬೆಳಗಾವಿ, ಡಿ.17–** ಗೃಹಲಕ್ಷ್ಮಿ ಯೋಜನೆಯ ಹಣ ಬಿಡುಗಡೆ ಸಂಬಂಧ ಸದನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಪ್ಪು ಮಾಹಿತಿ ನೀಡಿದ್ದಾರೆ. ಅವರು ಸದನಕ್ಕೆ ಬಂದು ಸ್ಪಷ್ಟ ಉತ್ತರ ನೀಡಿ ರಾಜ್ಯದ ಜನತೆಯ ಕ್ಷಮೆ ಕೇಳಬೇಕು ಎಂಬ ವಿಚಾರ ಸದನದಲ್ಲಿಂದು ಗದ್ದಲ, ಧರಣಿ, ಸಭಾತ್ಯಾಗಕ್ಕೆ ಕಾರಣವಾಯಿತು.

ಸದನ ಆರಂಭವಾಗುತ್ತಿದ್ದಂತೆಯೇ ಪ್ರತಿಪಕ್ಷಗಳು ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ರವರನ್ನು ಸದನಕ್ಕೆ ಕರೆಸಿ ಉತ್ತರ ಕೊಡಿಸಬೇಕು ಎಂದು ಆಗ್ರಹಿಸಿ ಧರಣಿ ನಡೆಸಿದ್ದರಿಂದ ಸದನವನ್ನು ಕೆಲಕಾಲ ಮುಂದೂಡಿ ಮತ್ತೆ ಸದನ ಸಮಾವೇಶಗೊಂಡು ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ಸದನಕ್ಕೆ ಬಂದು ಗೃಹಲಕ್ಷ್ಮೀ ಯೋಜನೆಯ ಹಣ ಬಿಡುಗಡೆ ಬಗ್ಗೆ ಸದನ ದಿಕ್ಕು ತಪ್ಪಿಸುವ ಉದ್ದೇಶ ನನಗಿರಲಿಲ್ಲ ಎಂದು ಹೇಳಿ ಮೊದಲಿಗೆ ವಿಷಾದ ವ್ಯಕ್ತಪಡಿಸಿ, ನಂತರ ಕ್ಷಮೆ ಕೋರುವುದಾಗಿ ಹೇಳಿದರಾದರೂ ಅವರ ಉತ್ತರದಿಂದ ತೃಪ್ತರಾಗದ ಪ್ರತಿಪಕ್ಷಗಳು ಸಭಾತ್ಯಾಗ ಮಾಡಿದವು.

ಬೆಳಿಗ್ಗೆ ಧರಣಿಯಿಂದ ಮುಂದೂಡಲಾಗಿದ್ದ ಸದನ ಮತ್ತೆ ಮಧ್ಯಾಹ್ನ 11.50ರ ಸುಮಾರಿಗೆ ಸಮಾವೇಶಗೊಂಡಾಗ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ಸದನಕ್ಕೆ ಆಗಮಿಸಿದ್ದಾರೆ. ಧರಣಿ ವಾಪಸ್ ಪಡೆಯಿರಿ, ಅವರು ಉತ್ತರ ಕೊಡುತ್ತಾರೆ ಎಂದು ಹೇಳಿದಾಗ ಪ್ರತಿಪಕ್ಷಗಳು ನಾವು ಧರಣಿ ಮುಂದುವರೆಸುತ್ತೇವೆ, ಅವರು ಉತ್ತರ ಕೊಡಲಿ ಎಂದು ಹೇಳಿದರಾದರೂ ಸಭಾಧ್ಯಕ್ಷರು ಇಲ್ಲ, ಧರಣಿ ಕೈಬಿಡಿ ಎಂದು ಪ್ರತಿಪಕ್ಷಗಳಿಗೆ ಮನವಿ ಮಾಡಿದಾಗ ಪ್ರತಿಪಕ್ಷ ನಾಯಕರು, ಆಯಿತು ಸಭಾಧ್ಯಕ್ಷರೇ, ಈಗ ನಾವು ಧರಣಿ ವಾಪಸ್ ಪಡೆಯುತ್ತೇವೆ. ಮುಂದೆ ಅವರ ಉತ್ತರ ನೋಡಿಕೊಂಡು ಏನು ಮಾಡಬೇಕೋ ಎಂಬ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಹೇಳಿ ಧರಣಿ ವಾಪಸ್ ಪಡೆದರು.

ಇದಾದ ಬಳಿಕ ಸಚಿವ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿ, ನಾನು ಉದ್ದೇಶಪೂರ್ವಕವಾಗಿ ಸದನಕ್ಕೆ ತಪ್ಪು ಮಾಹಿತಿ ನೀಡಿಲ್ಲ. ಸದನದ ದಿಕ್ಕು ತಪ್ಪಿಸುವ ಉದ್ದೇಶ ನನಗಿರಲಿಲ್ಲ. ನನ್ನ ಮಾತುಗಳಿಂದ ಯಾರಿಗಾದರೂ ನೋವಾಗಿದ್ದರೆ ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೇಳಿದರಾದರೂ ಇದನ್ನು ಒಪ್ಪದ ವಿಪಕ್ಷಗಳು, ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ಅವರು ಸದನಕ್ಕೆ ತಪ್ಪು ಮಾಹಿತಿ ನೀಡಿರುವುದನ್ನು ಒಪ್ಪಿಕೊಳ್ಳಬೇಕು, ಸದನದ ಕ್ಷಮೆ ಕೇಳಬೇಕು ಎಂದು ಪಟ್ಟು ಹಿಡಿದರು.

ಆಗ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ, ಆರೋಪ-ಪ್ರತ್ಯಾರೋಪಗಳು ನಡೆದು, ಸದನದಲ್ಲಿ ಗದ್ದಲದ ವಾತಾವರಣ ರೂಪುಗೊಂಡಿತು.

ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ಗ್ಯಾರಂಟಿ ಯೋಜನೆಯ ಯಶಸ್ಸು ಈ ಬಗ್ಗೆ ಮಾತನಾಡುತ್ತಿದ್ದಾರೆ. ಅದು ನಮಗೆ ಬೇಕಿಲ್ಲ, ಸದನಕ್ಕೆ ತಪ್ಪು ಮಾಹಿತಿ ನೀಡಿರುವುದಕ್ಕೆ ಅವರು ಕ್ಷಮೆ ಕೇಳಬೇಕು ಹಾಗೂ ತಪ್ಪು ಮಾಹಿತಿ ನೀಡಿರುವುದನ್ನು ಒಪ್ಪಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಹಂತದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಬಿಜೆಪಿಯ ಸುನೀಲ್‌ಕುಮಾರ್ 2 ತಿಂಗಳ ಕಂತನ್ನು ಪಾವತಿಸದೆ ಮುಂದಿನ ಕಂತುಗಳನ್ನು ಗೃಹಲಕ್ಷ್ಮಿ ಯೋಜನೆಯಡಿ ಪಾವತಿಸಲಾಗಿದೆ. ಹಾಗಾದರೂ ಸರ್ಕಾರ ದಿವಾಳಿಯಾಗಿದೆ ಎಂದು ಏರು ಧ್ವನಿಯಲ್ಲಿ ಪ್ರಶ್ನಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು ಉತ್ತರ ಕೊಡುವಾಗ ನಾನು ಸದನದಲ್ಲಿದ್ದೆ. ಅವರು ಕಂತುಗಳ ಬಗ್ಗೆ ಉತ್ತರಿಸಿದ್ದರು ಅಷ್ಟೆ. ಕೇಂದ್ರ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ಕೊಡುತ್ತೇನೆ ಎಂದು ಹೇಳಿ ಕೊಡಲಿಲ್ಲ. ನರೇಗಾದಲ್ಲೂ ಕೇಂದ್ರದಿಂದ ಬರಬೇಕಾದ ಹಣ ಬಾಕಿ ಇದೆ. ಜಲಜೀವನ್ ಮಿಷನ್‌ನಲ್ಲೂ ಹಣ ಬಾಕಿ ಇದೆ. ಹಾಗೆಂದು ಕೇಂದ್ರ ಸರ್ಕಾರ ದಿವಾಳಿಯಾಗಿದೆ ಎಂದು ನಾವು ಹೇಳಲು ಬರಲ್ಲ ಎಂದು ಹೇಳಿ, ಬಿಜೆಪಿಯವರು ನಮ್ಮ ಗ್ಯಾರಂಟಿಗಳನ್ನು ಕಾಪಿ ಮಾಡಿ ಬೇರೆ ರಾಜ್ಯಗಳಲ್ಲಿ ಚುನಾವಣೆ ಗೆದ್ದಿದ್ದಾರೆ. ಇಲ್ಲದಿದ್ದರೆ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ ಎಂದು ಮಾತಿನಿಂದ ಚುಚ್ಚಿದರು.

ಆಗ ಪ್ರತಿಪಕ್ಷಗಳ ಕೆಲ ಸದಸ್ಯರು ಈಗ ಚುನಾವಣೆಗೆ ಬನ್ರೀ.. ನೋಡೋಣ ಎಂದು ಸವಾಲು ಹಾಕಿದಾಗ ಸಚಿವ ಪ್ರಿಯಾಂಕ ಖರ್ಗೆಯವರು ಇದಕ್ಕೆ ನಾವು ಸಿದ್ಧ. ಮತಗಳ್ಳತನ ಮಾಡಿ ಚುನಾವಣೆ ಗೆದ್ದಿದ್ದೀರಿ ಎಂದು ತಿರುಗೇಟು ಕೊಟ್ಟರು.

ಈ ಹಂತದಲ್ಲಿ ಮತ್ತೆ (**2ನೇಪುಟಕ್ಕೆ..**)

## ಶುದ್ಧತೆ, ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡಿ: ಎಸಿ ಗಜಾನನ ಬಾಳೆ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.17–**ಉಪ ವಿಭಾಗದ ಎಲ್ಲಾ ವ್ಯಾಪಾರಿಗಳು ಹಾಗೂ ಹೋಟೆಲ್, ಅಂಗಡಿ ಸೇರಿದಂತೆ ಇತರೆ ಆಹಾರ ಕೇಂದ್ರಗಳು ತಪ್ಪದೇ ತಮ್ಮ ಆವರಣದಲ್ಲಿ ಶುದ್ಧತೆ, ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡಬೇಕೆಂದು ರಾಯಚೂರು ಕಂದಾಯ ಉಪ ವಿಭಾಗದ ಸಹಾಯಕ ಆಯುಕ್ತರಾದ ಗಜಾನನ ಬಾಳೆ ಅವರು ಸೂಚಿಸಿದರು.

ಇತ್ತೀಚೆಗೆ ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ತಹಶೀಲ್ದಾರ್ ಕಾರ್ಯಾಲಯ, ಪುರಸಭೆ, ತಾಲೂಕ ಆರೋಗ್ಯ ಇಲಾಖೆ, ಆಹಾರ ಸುರಕ್ಷತಾ ಇಲಾಖೆ, ಕಂದಾಯ ಇಲಾಖೆ, ಪುರಸಭೆ ಹಾಗೂ ಪೋಲಿಸ್ ಇಲಾಖೆಯೊಂದಿಗೆ ವಿವಿಧ ಹೋಟೆಲ್ ಮತ್ತು ಬಾರ್ & ರೆಸ್ಟೋರೆಂಟ್‌ಗಳ ಮೇಲೆ ಹಠಾತ್ ದಾಳಿ ಮಾಡಿ ಗುಣಮಟ್ಟವನ್ನು ಪರಿಶೀಲಿಸಿ, ಅವರು ಮಾತನಾಡಿದರು.

ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ,2006ರ ಹಾಗೂ ಆಹಾರ ಸುರಕ್ಷತೆ ಮತ್ತು ಮಾನದಂಡಗಳ ನಿಯಮಗಳು 2011ರ ಸೂಚನೆಗಳನ್ನು ಒಂದು ವಾರದೊಳಗಾಗಿ ಅನುಸರಿಸಬೇಕು. ಆಹಾರ ವ್ಯಾಪಾರ ನಿರ್ವಾಹಕರು ಸುಧಾರಣಾ ಸೂಚನೆಯನ್ನು ಅನುಸರಿಸಲು ವಿಫಲವಾದರೆ ಅವರ ಪರವಾನಿಗೆಯನ್ನು ಅಮಾನತುಗೊಳಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದರು.

ರಾಯಚೂರು ಕಂದಾಯ ಉಪ ವಿಭಾಗದ ವ್ಯಾಪ್ತಿಯ ಹೋಟೇಲ್‌ಗಳಲ್ಲಿ ಗುಣಮಟ್ಟವಾಗಿ ಆಹಾರ ಸುಧಾರಣೆ ಮಾಡಲು ಈಗಾಗಲೇ ಆಹಾರ ಸುರಕ್ಷತಾ ಅಧಿಕಾರಿಗಳಿಂದ ನೋಟಿಸ್ ನೀಡಲಾಗಿದೆ. ಮಾನವಿಯ ನಿಸರ್ಗ ಹೋಟೆಲ್, (**2ನೇಪುಟಕ್ಕೆ..**)

## ಮಾನ್ವಿ ನಗರದ ಉರ್ದು ಪ್ರೌಢಶಾಲೆಯಲ್ಲಿ ಉಚಿತ ಯೋಗ ಮತ್ತು ಧ್ಯಾನ ಶಿಬಿರ

ಯುವಮಾರ್ಗ ಸುದ್ದಿ




**ಮಾನ್ವಿ,ಡಿ.17–** ಸ್ಥಳೀಯ ಉರ್ದು ಪ್ರೌಢ ಶಾಲೆಯಲ್ಲಿ ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ ವತಿಯಿಂದ ವಿಶ್ವ ಧ್ಯಾನ ದಿನಾಚರಣೆಯ ಅಂಗವಾಗಿ ಶಾಲಾ ಮಕ್ಕಳಿಗಾಗಿ ಉಚಿತ ಯೋಗ ಮತ್ತು ಧ್ಯಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರವನ್ನು ಯೋಗ ಗುರುಗಳಾದ ಅನ್ನದಾನಯ್ಯ ಅವರು ನಡೆಸಿಕೊಟ್ಟರು. ಶಿಬಿರದ ಆರಂಭದಲ್ಲಿ ವಿದ್ಯಾರ್ಥಿಗಳಿಗೆ ವೃಕ್ಷಾಸನ, ತ್ರಿಕೋನಾಸನ, ಉತ್ಕಟಾಸನ, ಪಾದಹಸ್ತಾಸನ, ಜಾನುಶೀರ್ಷಾಸನ, ಉಷ್ಟ್ರಾಸನ ಹಾಗೂ ವಜ್ರಾಸನದಂತಹ ಪ್ರಮುಖ ಯೋಗಾಸನಗಳನ್ನು ಅಭ್ಯಾಸ ಮಾಡಿಸಲಾಯಿತು. ತದನಂತರ ನಾಡಿಶುದ್ಧಿ ಮತ್ತು ಬ್ರಾಹ್ಮರಿ ಪ್ರಾಣಾಯಾಮಗಳ ಜೊತೆಗೆ ಧ್ಯಾನದ ಕ್ರಮಗಳನ್ನು ಹೇಳಿಕೊಟ್ಟು, ಅವುಗಳಿಂದಾಗುವ ದೈಹಿಕ ಹಾಗೂ ಮಾನಸಿಕ ಪ್ರಯೋಜನಗಳ (**2ನೇಪುಟಕ್ಕೆ..**)

## ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಕೆ



ಯುವಮಾರ್ಗ ಸುದ್ದಿ

**ಅರಕೇರಾ,ಡಿ.17–**ಬಗರ ಹುಕುಂ ಸಾಗುವಳಿದಾರರ ಅನಧಿಕೃತ ಸಾಗುವಳಿ ಸಕ್ರಮಗೊಳಿಸಲು ಹಾಕಿದ ನಮೂನೆ_57 ತಿರಸ್ಕರಿಸಿದ ಅರ್ಜಿಗಳನ್ನು ಮರುಪರಿಶೀಲಿಸಿ ಎಲ್ಲಾ ಭೂ ರಹಿತರನ್ನು ಸಕ್ರಮಗೊಳಿಸಲುಹಾಗೂ ವಸತಿ ಸಮಸ್ಯೆಗಳು ಸೇರಿದಂತೆ ಅಗತ್ಯ ಸೌಕರ್ಯಗಳಿಗಾಗಿ ಒತ್ತಾಯಿಸಿ ತಹಶೀಲ್ದಾರ ಅಮರೇಶ ಬಿರಾದಾರ ಇವರಿಗೆ ಪ್ರೋ.ಬಿ.ಕೃಷ್ಣಪ್ಪನವರು ಸ್ಥಾಪಿಸಿದ ಕರ್ನಾಟಕದಲಿತ ಸಂಘರ್ಷಸಮಿತಿ(ರಿ) ರಾಜ್ಯ ಸಂಘಟನಾ ಸಂಚಾಲಕರಾದ ಹನುಮಂತಪ್ಪ ಕಾಕರಗಲ್ ಇವರು ಮನವಿ ಪತ್ರ ಸಲ್ಲಿಸಿದರು.

ಭೂ ರಹಿತ ಬಡವರು ಸರಕಾರಿ ಭೂಮಿಯಲ್ಲಿ ಹಲವು ದಶಕಗಳಿಂದ ಅನಧಿಕೃತವಾಗಿಸಾಗುವಳಿ ಮಾಡುತ್ತಿದ್ದಾರೆ. ಅದನ್ನು ಸಕ್ರಮಗೊಳಿಸಲು ಕಾನೂನು ಪ್ರಕಾರ ಸರಕಾರವೇ ಘೋಷಿಸಿದ ನಮೂನೆ-57ರಡಿ ಹಾಕಿದ ಅರ್ಜಿಗಳನ್ನು ತಿರಸ್ಕಾರ ಮಾಡಲಾಗಿದೆ .ಇದರಿಂದ ಭೂರಹಿತ ಬಡವರಿಗೆ ಅನ್ಯಾಯವಾಗುತ್ತದೆ,ಕೂಡಲೇ ತಿರಸ್ಕರಿಸಿದ ಎಲ್ಲಾ ಅರ್ಜಿಗಳನ್ನು ಮರು ಪರಿಶೀಲನೆ ಮಾಡಿ ಅಂಗೀಕರಿಸಿ ಭೂ ಮಂಜೂರು ಮಾಡಬೇಕು. ಅರಣ್ಯ ಹಕ್ಕು ಕಾಯ್ದೆ1980 ರಡಿ ಅರಣ್ಯ ಭೂಮಿಒತ್ತುವರಿ ಸಾಗುವಳಿ ಸಕ್ರಮಗೊಳಿಸುವ ಕುರಿತು ರಾಜ್ಯ ಸರಕಾರ 2015 ಸೆಪ್ಟಂಬರ್ 21ರ (**2ನೇಪುಟಕ್ಕೆ..**)

## ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕ ಘಟಕದಿಂದ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.17–** ಪಟ್ಟಣದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕ ಘಟಕದ ಕಾರ್ಯಾಲಯದಲ್ಲಿ ಅ.ಖಿ.ಭಾ.ವೀ.ಲಿಂ.ಮಹಾಸಭಾದ ತಾಲೂಕ ಘಟಕದವತಿಯಿಂದ ಇತ್ತಿಚಿಗೆ ನಿಧನರಾದ ಅ.ಖಿ.ಭಾ.ವೀ.ಲಿಂ .ಮಹಾಸಭಾದ ರಾಷ್ಟೀಯ ಅಧ್ಯಕ್ಷರಾದ ಲಿಂ. ಡಾ. ಶಾಮನೂರ ಶಿವಶಂಕರಪ್ಪ ಹಾಗೂ ಮಾನ್ವಿ ತಾಲೂಕಿನ ಅಡವಿ ಅಮರೇಶ್ವರ ಮಠದ ಲಿಂ. ಶ್ರೀ ಶಾಂತಮಲ್ಲ ಮಹಾಸ್ವಾಮಿಗಳಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿ ಅ.ಖಿ.ಭಾ.ವೀ.ಲಿಂ.ಮಹಾಸಭಾದ ತಾಲೂಕ ಅಧ್ಯಕ್ಷರಾದ ಅರುಣ್ ಚಂದಾ ಮಾತನಾಡಿ ಅ.ಖಿ.ಭಾ.ವೀ.ಲಿಂ. ಮಹಾಸ ಭಾದ ರಾಷ್ಟೀಯ ಅಧ್ಯಕ್ಷರಾದ ಲಿಂ. ಡಾ. ಶಾಮನೂರ ಶಿವಶಂಕರಪ್ಪ ನವರು ರಾಜ್ಯದಲ್ಲಿ ವೀರಶೈವ ಲಿಂಗಾಯತ ಸಮುದಾಯವನ್ನು ಸಂಘಟಿಸಿ ಸಮುದಾ ಯದ ಅಭಿವೃದ್ದಿಗೆ ಶ್ರಮಿಸಿದ್ದರೆ ಅವರನ್ನು ವೀರಶೈವ ಲಿಂಗಾಯತ ಸಮಾಜ ಕಳೆದು ಕೊಂಡಂತಾಗಿದೆ ತಾಲೂಕಿನಲ್ಲಿನ ಅಡವಿ ಅಮರೇಶ್ವರ ಮಠದ ಲಿಂ. ಶ್ರೀ ಶಾಂತಮಲ್ಲ ಮಹಾಸ್ವಾಮಿಗಳು ಸಮಾಜ ಮುಖಿ ಕಾರ್ಯಗಳ ಮೂಲಕ ತಾಲೂಕಿನಲ್ಲಿ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ,ಸಾಹಿತ್ಯಿಕವಾಗಿ ಸಮಾಜಿಕ ಅಭಿವೃದ್ದಿಗೆ ಶ್ರಮಿಸಿದ್ದಾರೆ ಎಂದು ನುಡಿ ನಮನದಲ್ಲಿ ತಿಳಿಸಿದರು.

ಸಭೆಯಲ್ಲಿ ಬಣಜಿಗ ಸಮಾಜದ ತಾಲೂಕಾಧ್ಯಕ್ಷರಾದ ಮಲ್ಲಿಕಾರ್ಜುನಗೌಡ ಗಣೇಕಲ್, ತಾಲೂಕ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರ ಪಾಟೀಲ್ ,ಪದಾಧಿಕಾರಿಗಳಾದ ಶ್ರೀಧರ್ ಸ್ವಾಮಿ ಕೊಟ್ನೆಕಲ್, ವೀರನಗೌಡ ಸಂಗಾಪುರ, ಜಗದೀಶ ಓತೂರ, ರೇವಣಸಿದ್ದಯ್ಯ ಸ್ವಾಮಿ, ಪ್ರದೀಪ್ ಪಾಟೀಲ್, ಶರಣಪ್ಪ ಮಾಸ್ಟರ್ ಅ.ಖಿ.ಭಾ.ವೀ.ಲಿಂ. ಮಹಾಸಭಾದ ಪದಾಧಿಕಾರಿಗಳಾದ ಶಿವಲಿಂಗಯ್ಯ ಸ್ವಾಮಿ, ರವಿಕುಮಾರ ಪಾಟೀಲ್ ಚಿಮ್ಲಾಪುರ,ಶರಣಬಸವ, ವಿಶ್ವನಾಥ ಪಾಟೀಲ, ಗುರುಗೌಡ ಕಣ್ಣೂರು,ತಿಪ್ಪಣ್ಣ ಹೊಸಮನಿ,ಶಂಕರಪ್ಪ ನಕ್ಕುಂದಿ,ಮಲ್ಲಭದ್ರಗೌಡ ನೀರಮಾನ್ವಿ, ಜನಾರ್ದನ ಸಾಹುಕಾರ, ದೇವೇಂದ್ರ ಹೂಗಾರ, ಶಿವಕುಮಾರ್ ಪಾಟೀಲ್,ಮಂಜುನಾಥ ಪಾಟೀಲ್, ಮಾಧ್ಯಮ ಸಮಿತಿ ಅಧ್ಯಕ್ಷರಾದ ರಾಜಶೇಖರ ಸ್ವಾಮಿ, ಶರಣಬಸವಹರವಿ, ಶಿವಕುಮಾರಗೌಡ ಹಳ್ಳಿಹೊಸೂರು,ಬಸವರಾಜ ಹರನಳ್ಳಿ ,ಬಸವಂತ ಶೆಟ್ಟಿ, ಶರಣಯ್ಯ ಸ್ವಾಮಿ, ಹೊಯ್ಸಳ ಸ್ವಾಮಿ, ನಾಗರಾಜ, ದರ್ಶನ ಪಾಟೀಲ ಸಂಗಾಪುರ ನಿರ್ಮಲಾ , ಕು.ಶೃತಿ ಪಾಟೀಲ್ ಇದ್ದರು.

## ಪುರಸಭೆ ವ್ಯಾಪ್ತಿಯ ಸಿ.ಸಿ ರಸ್ತೆಗಳಲ್ಲಿ ವೇಗ ನಿಯಂತ್ರಕ ಅಳವಡಿಸಲು ಕರವೇ ಸ್ವಾಭಿಮಾನಿ ಸೇನೆ ಅಗ್ರಹ

ಯುವಮಾರ್ಗ ಸುದ್ದಿ



**ಲಿಂಗಸಗೂರು, ಡಿ.17–** ಪಟ್ಟಣದ ಬಡಾವಣೆಯಲ್ಲಿ ನಿರ್ಮಿಸ ಲಾಗುತ್ತಿರುವ ಸಿಸಿ ರಸ್ತೆಗಳ ಮೇಲೆ ಇತ್ತೀಚಿನ ದಿನಗಳಲ್ಲಿ ವಾಹನ ಸಂಚಾರವು ಅತಿ ಹೆಚ್ಚಾಗಿದ್ದು, ಕೆಲವು ವಾಹನ ಚಾಲಕರು ಅತಿವೇಗದಲ್ಲಿ ಸಂಚರಿಸುತ್ತಿದ್ದಾರೆ. ಇದರಿಂದ ಪಾದಚಾರಿಗಳು, ಶಾಲಾ ಮಕ್ಕಳು, ವೃದ್ಧರು ಹಾಗೂ ಮಹಿಳೆಯರಿಗೆ ರಸ್ತೆ ದಾಟುವ ಸಂದರ್ಭದಲ್ಲಿ ಅಪಾಯ ಎದುರಾಗುತ್ತಿದ್ದು ಕೂಡಲೇ ಸಿಸಿ ರಸ್ತೆಗಳಲ್ಲಿ ರಬ್ಬರ್ ಹಂಪ್ಸ್ ಅಳವಡಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ (ರೀ) ತಾಲೂಕ ಅಧ್ಯಕ್ಷ ಜಿಲಾನಿ ಪಾಷಾ ಪುರಸಭೆಯ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಿ ನಂತರ ಮಾತನಾಡಿದ ಅವರು

ಪಟ್ಟಣದ ವಿವಿಧ ವಾರ್ಡುಗಳಲ್ಲಿ ವಿಶೇಷವಾಗಿ ಶಾಲೆ, ಅಂಗನವಾಡಿ, ದೇವಸ್ಥಾನ, ಆಸ್ಪತ್ರೆ, ಬಸ್ ನಿಲ್ದಾಣ ಹಾಗೂ ವಸತಿ ಪ್ರದೇಶಗಳ ಬಳಿ ಯಾವುದೇ ವೇಗ ನಿಯಂತ್ರಣ ವ್ಯವಸ್ಥೆ ಇಲ್ಲದ ಕಾರಣ ಅಪಘಾತಗಳು ಸಂಭವಿಸುವ ಆತಂಕ ಹೆಚ್ಚಾಗಿದೆ. ಈ ಹಿನ್ನೆಲೆ ಸಾರ್ವಜನಿಕರ ಸುರಕ್ಷತೆಗಾಗಿ ಸಿಸಿ ರಸ್ತೆ ಗಳಲ್ಲಿ ಸೂಕ್ತ ಅಂತರದಲ್ಲಿ ರಬ್ಬರ್ ಹಂಪ್ಸ್ (ವೇಗ ನಿಯಂತ್ರಕಗಳು) ಅಳ ವಡಿಸುವುದು ಅತ್ಯಂತ ಅಗತ್ಯವಾಗಿದೆ. ಪುರಸಭೆ ವ್ಯಾಪ್ತಿ ಯಲ್ಲಿ ನಿರ್ಮಿಸಲಾಗುತ್ತಿರುವ ಸಿಸಿ ರಸ್ತೆಗಳಲ್ಲಿ ರಬ್ಬರ್ ಹಂಪ್ಸ್‌ಗಳನ್ನು ಅಳವಡಿಸಿ ಅಪಘಾತಗಳನ್ನು ತಡೆಯಬೇಕೆಂದು ಒತ್ತಾಯಿಸಿದ ಅವರು ಒಂದು ವೇಳೆ ನಮ್ಮ ಮನವಿಗೆ ಸ್ಪಂದಿಸದಿದ್ದರೆ ಮುಂಬರುವ ದಿನಗಳಲ್ಲಿ ಪುರಸಭೆ ಕಾರ್ಯಾಲಯದ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಬೇ ಕಾಗುತ್ತದೆ ಎಂದು ಮನವಿ ಮೂಲಕ ಎಚ್ಚರಿಸಿದರು. ಈ ಸಂದರ್ಭದಲ್ಲಿ ರವಿಕು ಮಾರ್ ಬರಗುಡಿ, ಅಲ್ಲಾವುದ್ದೀನ್ ಬಾಬಾ, ಮೋಷಿನ್ ಖಾನ್, ಮರಿಯಪ್ಪ ಹಟ್ಟಿ, ಅಜೀಜ್ ಪಾಷಾ, ಶಬ್ಬಿರ್ ಆಟೋ, ವೀರೇಶ್ ಐದನಾಳ ಇದ್ದರು.

# ಮೊದಲನೇಯ ಪುಟದಿಂದ

## ವಿಧಾನಸಭೆಯಲ್ಲಿ ಗೃಹಲಕ್ಷ್ಮಿ ಗದ್ದಲ ಸಭಾತ್ಯಾಗ

ಸದನದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಗದ್ದಲದ ವಾತಾವರಣ ತಾರಕಕ್ಕೇರಿತು.

ಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಸಚಿವರು ಉತ್ತರ ಕೊಡುತ್ತಾರೆ, ಎಲ್ಲರೂ ಸುಮ್ಮನಿರಿ ಎಂದು ಗದ್ದಲವನ್ನು ನಿಯಂತ್ರಿಸಿದರು. ಆಗ ಮತ್ತೆ ಎದ್ದುನಿಂತ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ನಾನು ನನ್ನ ಮಾತಿಗೆ ವಿಷಾದ ವ್ಯಕ್ತಪಡಿಸಿದ್ದೇನೆ. ಆದರೂ ಪ್ರತಿಪಕ್ಷ ನಾಯಕರು ಕ್ಷಮಾಪಣೆಗೆ ಪಟ್ಟು ಹಿಡಿದಿದ್ದಾರೆ, ಆಗಲೀ ನಾನು ಕ್ಷಮಾಪಣೆ ಕೋರುತ್ತೇನೆ ಎಂದು ಹೇಳಿ, ಒಬ್ಬ ಮಹಿಳೆಯನ್ನು ಈ ರೀತಿ ಗುರಿ ಮಾಡುವುದು ತಪ್ಪು ಎಂದಾಗ ಒಮ್ಮೆಗೆ ಪ್ರತಿಪಕ್ಷದ ಎಲ್ಲಾ ಸದಸ್ಯರು ಎದ್ದುನಿಂತು ಈ ರೀತಿ ಸಚಿವರು ಮಾತನಾಡುವುದು ತಪ್ಪು. ಸದನದಲ್ಲಿ ಲಿಂಗ, ಜಾತಿ ಯಾವುದೂ ಬರಲ್ಲ. ಅವರು ಸಚಿವರು ಅಷ್ಟೇ. ಈ ರೀತಿ ಮಾತನಾಡಬಾರದು ಎಂದು ಸಚಿವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದರು.

ಸಚಿವ ಶರಣ ಪ್ರಕಾಶ್ ಪಾಟೀಲ್ ಸಹ ವಿಪಕ್ಷಗಳು ಒಬ್ಬ ಸಚಿವೆ ಮೇಲೆ ಈ ರೀತಿ ಮುಗಿ ಬೀಳುವುದು ಸರಿಯಲ್ಲ ಎಂದಾಗ ಮತ್ತೆ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು.

ಈ ಹಂತದಲ್ಲಿ ಸಚಿವ ಹೆಚ್.ಕೆ. ಪಾಟೀಲ್ ಎದ್ದು ನಿಂತು, ಹೀಗೆ ಉತ್ತರ ಕೊಡಬೇಕು ಎಂಬುದು ಸರಿಯಲ್ಲ. ಸಚಿವರು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಈಗ ಇದನ್ನು ಇಲ್ಲಿಗೆ ಬಿಡೋಣ ಎಂದರು.

ಆಗ ಪ್ರತಿಪಕ್ಷ ನಾಯಕ ಆರ್. ಅಶೋಕ್ ಎದ್ದು ನಿಂತು ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ರವರ ಉತ್ತರ ನಮಗೆ ಸರಿ ಎನಿಸಿಲ್ಲ. ಅವರು ಸಮರ್ಪಕವಾದ ಉತ್ತರ ಕೊಟ್ಟಿಲ್ಲ. ಇದನ್ನು ಪ್ರತಿಭಟಿಸಿ ನಾವು ಸದನದಿಂದ ಹೊರಗೆ ಹೋಗುತ್ತಿದ್ದೇವೆ ಎಂದು ಹೇಳಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರ ಜತೆ ಸಭಾತ್ಯಾಗ ಮಾಡಿದರು.

ಇದಕ್ಕೂ ಮೊದಲು ಇಂದು ಬೆಳಿಗ್ಗೆ ಸದನ ಸಮಾವೇಶಗೊಳ್ಳುತ್ತಿದ್ದಂತೆಯೇ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಗೃಹಲಕ್ಷ್ಮಿ ಹಣ ಬಿಡುಗಡೆಗೆ ಸಂಬಂಧಿಸಿದಂತೆ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ತಪ್ಪು ಮಾಹಿತಿ ನೀಡಿದ್ದಾರೆ. ಅವರನ್ನು ಸದನಕ್ಕೆ ಕರೆಸಿ ಉತ್ತರ ಕೊಡಿಸಿ, ಅಲ್ಲಿಯವರೆಗೂ ಯಾವ ಕಲಾಪಗಳು ಬೇಡ ಎಂದು ಹೇಳಿ, ಪಟ್ಟು ಹಿಡಿದು ಧರಣಿ ನಡೆಸಿದವು.

ವಿಪಕ್ಷಗಳ ಧರಣಿಯಿಂದ ಸಭಾಧ್ಯಕ್ಷ ಯು.ಟಿ. ಖಾದರ್ ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು.

ಇದಕ್ಕೂ ಮುನ್ನ ಪ್ರತಿಪಕ್ಷ ನಾಯಕ ಆರ್. ಅಶೋಕ್ ಅವರು, ರಾಜ್ಯ ಸರ್ಕಾರ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಕೊಡದೆ ವಂಚಿಸಿದೆ. ಇದು 5 ಸಾವಿರ ಕೋಟಿ ರೂ. ಹಗರಣ. ಈ ಬಗ್ಗೆ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ರವರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆವರನ್ನು ಸದನಕ್ಕೆ ಕರೆಸಿ ಉತ್ತರ ಕೊಡಿಸಿ ಎಂದು ಒತ್ತಾಯಿಸಿದರು.

ಆಗ ಸಚಿವ ಪ್ರಿಯಾಂಕ ಖರ್ಗೆಯವರು ಸಚಿವರು ಸದನಕ್ಕೆ ಬರುತ್ತಾರೆ, ಉತ್ತರ ಕೊಡುತ್ತಾರೆ. ಉತ್ತರ ಕರ್ನಾಟಕದ ಚರ್ಚೆಯ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ನೀಡಿದ ನಂತರ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್ ಈ ಬಗ್ಗೆ ಸದನಕ್ಕೆ ಉತ್ತರ ನೀಡುವರು ಎಂದು ಹೇಳಿದರಾದರೂ ಇದನ್ನು ಒಪ್ಪದ ಪ್ರತಿಪಕ್ಷ ಸದಸ್ಯರು, ಪ್ರಶ್ನೋತ್ತರ ಕಲಾಪಕ್ಕೂ ಮೊದಲೇ ನಮಗೆ ಉತ್ತರ ಬೇಕು. ನಾವು ಗೃಹಲಕ್ಷ್ಮಿ ಹಣ ನೀಡಿರುವ ಬಗ್ಗೆ ಅಥವಾ ನೀಡದಿರುವ ಬಗ್ಗೆ ಮಾತನಾಡುತ್ತಿಲ್ಲ. ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಅದಕ್ಕೆ ಉತ್ತರ ಬೇಕು ಎಂದು ಪಟ್ಟು ಹಿಡಿದರು.ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಸದನದಲ್ಲಿ ಗದ್ದಲದ ವಾತಾವರಣ ರೂಪುಗೊಂಡಿತು.

ಗದ್ದಲದಲ್ಲಿಯೇ ಮಾತನಾಡಿದ ಬಿಜೆಪಿಯ ಸುನೀಲ್‌ಕುಮಾರ್ ರವರು ಮೂರು ದಿನದಿಂದ ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ್ದೇವೆ. ಆದರೆ ಸಚಿವರು ಇದುವರೆಗೂ ಬಂದು ಉತ್ತರ ನೀಡಿಲ್ಲ. ಅವರನ್ನು ಕರೆಸಿ, ಅಲ್ಲಿಯವರೆಗೂ ಸದನ ನಡೆಯಲು ನಾವು ಬಿಡಲ್ಲ, ನಮಗೆ ಉತ್ತರ ಬೇಕು ಎಂದರು.ಇದಕ್ಕೆ ದನಿಗೂಡಿಸಿದ ಬಸನಗೌಡ ಪಾಟೀಲ್ ಯತ್ನಾಳ್, ಪ್ರಶ್ನೆಗೆ ಉತ್ತರ ಕೊಡದಿದ್ದ ಮೇಲೆ ಪ್ರಶ್ನೋತ್ತರ ಕಲಾ ನಡೆಸಿ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಈ ಹಂತದಲ್ಲಿ ಎದ್ದುನಿಂತ ಮಾತನಾಡಿದ ಆರ್. ಅಶೋಕ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಪ್ಪು ಉತ್ತರ ಕೊಟ್ಟಿದ್ದರೆ ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ಸಚಿವರು ಸದನಕ್ಕೆ ಬಂದಿಲ್ಲ. ಇದು 1 ಕೋಟಿ 24 ಲಕ್ಷ ಜನರ ಪ್ರಶ್ನೆ. ಫೆಬ್ರವರಿ, ಮಾರ್ಚ್ ತಿಂಗಳ ಗೃಹಲಕ್ಷ್ಮಿ ಹಣ ಕೊಡದೆ, ನಂತರ ಏಪ್ರಿಲ್, ಮೇ ತಿಂಗಳ ಗೃಹಲಕ್ಷ್ಮಿ ಕಂತನ್ನು ಪಾವತಿಸಲಾಗಿದೆ.

ಇದು ಹೇಗೆ ಸಾಧ್ಯ. 2 ತಿಂಗಳ ಹಣಕ್ಕೆ ಕತ್ತರಿ ಹಾಕಲಾಗಿದೆ. ಇದು ಜನರಿಗೆ ಮಾಡಿದ ಮೋಸ. ಖಜಾನೆ ಖಾಲಿಯಾಗಿದೆಯೇ ಈ ಹಣ ಎಲ್ಲಿಗೆ ಹೋಗಿದೆ, ಸ್ವಂತಕ್ಕೆ ಹೋಗಿದೆಯೇ ಅಥವಾ ಪಕ್ಷಕ್ಕೆ ಹೋಗಿದೆಯೇ ಎಂಬ ಬಗ್ಗೆ ಸಚಿವರು ಉತ್ತರ ಕೊಡಬೇಕು ಎಂದು ಒತ್ತಾಯಿಸಿ, ಸಚಿವರು ಉತ್ತರ ಕೊಡುವವರೆಗೂ ನಾವು ಬಿಡಲ್ಲ ಎಂದು ಹೇಳಿ, ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗೆ ಧಾವಿಸಿ ಧರಣಿ ಆರಂಭಿಸಿ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.ಆಗ ಸಭಾಧಕ್ಷ ಯು.ಟಿ. ಖಾದರ್ ಅವರು ಸದನವನ್ನು 10 ನಿಮಿಷಗಳ ಕಾಲ ಮುಂದೂಡಿದರು.

## ಮಾನ್ವಿ ನಗರದ ಉರ್ದು ಪ್ರೌಢಶಾಲೆಯಲ್ಲಿ ಉಚಿತ ಯೋಗ ಮತ್ತು ಧ್ಯಾನ ಶಿಬಿರ

ಬಗ್ಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಸಮಾರೋಪ ನುಡಿಗಳನ್ನಾಡಿದ ಶಾಲೆಯ ಮುಖ್ಯಗುರುಗಳಾದ ಅಶೋಕ್ ಕುಮಾರ್ ಚಿಂಚೋಳ್ಳಿ ಅವರು, ಇಂದಿನ ವೇಗದ ಜೀವನಶೈಲಿಯಲ್ಲಿ ನೆಮ್ಮದಿಯ ಜೀವನ ನಡೆಸಲು ಯೋಗ ಮತ್ತು ಧ್ಯಾನವನ್ನು ರೂಢಿಸಿಕೊಳ್ಳುವುದು ಅತ್ಯಗತ್ಯ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಇದೇ ಸಂದರ್ಭದಲ್ಲಿ ಯೋಗ ಗುರು ಅನ್ನದಾನಯ್ಯನವರನ್ನು ಶಾಲಾ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಹ ಶಿಕ್ಷಕಿ ಅಹಮ್ಮದಿ ಬೇಗಮ್, ಅತಿಥಿ ಶಿಕ್ಷಕರಾದ ಆಯಿಷಾ ಬೇಗಮ್, ಇಮ್ರಾನ್ ಬೇಗಂ, ಸಿದ್ದಪ್ಪ ಹಾಗೂ ಶಾಲೆಯ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಶುದ್ಧತೆ, ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡಿ: ಎಸಿ ಗಜಾನನ ಬಾಳೆ

ಸಾಧಿಕ್ ಹೋಟೆಲ್, ಲಕ್ಷ್ಮೀವಿಲಾಸ ಹೋಟೆಲ್, ಗಗನ್ ಬಾರ್ & ರೆಸ್ಟೋರೆಂಟ್, ಜನತಾ ಹೋಟೆಲ್, ಡಾನ್ ಡಾಬಾಗಳ ಮೇಲೆ ದಾಳಿ ಮಾಡಿದರು. ಡಾನ್ ಡಾಬಾವನ್ನು ಸುಧಾರಣೆ ಮಾಡಲು ಅಪರ ಜಿಲ್ಲಾಧಿಕಾರಿಗಳು ಈ ಹಿಂದೆ ದಂಡ ವಿಧಿಸಿದರು ಸಹ ಯಾವುದೇ ಸುಧಾರಣೆಯಾಗದೇ ಇರುವುದು ಕಂಡು ಬಂದಿರುತ್ತದೆ. ಮತ್ತು ಮದ್ಯವನ್ನು ಡಾಬಾದಲ್ಲಿ ಸೇವನೆ ಮಾಡುತ್ತಿರುವುದು ದಾಳಿ ವೇಳೆಯಲ್ಲಿ ಕಂಡುಬಂದಿ ಎಂದರು.

ವಿ.ಎ.ಬಾರ್ & ರೆಸ್ಟೋರೆಂಟ್‌ನಲ್ಲಿ ನೀರಿನ ಗಿಜರ್ ಸ್ಥಳದಲ್ಲಿ ಕಲ್ಲಿದ್ದಲು ಮತ್ತು ಸಿಲೆಂಡರ್‌ಗಳನ್ನು ಸಂಗ್ರಹ ಮಾಡಲಾಗುತ್ತಿದೆ. ಹಾಗೂ ಅಡುಗೆ ಕೋಣೆಯಿಂದ ಬರುವಂತಹ ಹೊಗೆಯನ್ನು 02 ಎಕ್ಸ್ ಫ್ಯಾನ್‌ಗಳ ಮುಖಾಂತರ ಈ ಕೋಣೆಯಲ್ಲಿಯೇ ಬಿಟ್ಟಿರುತ್ತಾರೆ. ಇದರಿಂದ ಕೊಣೆಯ ತಾಪಮಾನ ಏರುಪೇರಿನಲ್ಲಿ ಅಗ್ನಿ ಅವಗಡ ಸಂಭವಿಸುವ ಸಂಭವವಿದ್ದು, ಈ ಹೋಟೇಲ್ ಮಾಲೀಕರಿಂದ ಯಾವುದೇ ಬೆಂಕಿ ನಿಂದಿಸುವ ಸಲಕರಣೆಗಳು ಇರಿಸದೇ ಇರುವುದು ಕಂಡು ಬಂದಿದೆ ಎಂದರು.

ಈ ಹೋಟಲ್‌ಗಳಿಗೆ ನಿಯಮಾನುಸಾರ ಕಾಯ್ದೆ ಪ್ರಕಾರ ಗೃಹ ಬಳಕೆ ಸಿಲಿಂಡರ್‌ಗಳ ಕುರಿತು ಉಪ ನಿರ್ದೇಶಕರು ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ರಾಯಚೂರು ಇವರು ಕಾನೂನು ಕ್ರಮಕೈಗೊಳ್ಳುತ್ತಾರೆ. ಎಲ್ಲಾ ಹೋಟೆಲ್‌ಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದರಿಂದ ಪುರಸಭೆ ಮಾನ್ವಿ ಇವರಿಂದ ದಂಡ ಹಾಗೂ ಈ ಸಾಮಗ್ರಿಗಳನ್ನು ಮುಟ್ಟುಗೋಲು ಮಾಡಿಕೊಳ್ಳಲಾಗಿದೆ ಎಂದರು.

ಆಹಾರ ಸುರಕ್ಷತಾ ಅಧಿಕಾರಿಗಳು ಮಾನವಿ ಇವರು ಸಾಧಿಕ್ ಹೋಟೆಲ್ ಮತ್ತು ಡಾನ್ ಡಾಬಾ ಇವರ ಆಹಾರ ಪರವಾನಿಗೆ ಪ್ರಮಾಣ ಪತ್ರ ಅಥವಾ ಅರ್ಜಿಯನ್ನು ಅಮಾನತ್ತುಗೊಳಿಸಲು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾದೆ. ವಿ.ಎ.ಬಾರ್ & ರೆಸ್ಟೋರೆಂಟ್ ಇವರು ಅವಶ್ಯಕತೆ ಇರುವ ಸ್ಥಳದಲ್ಲಿ ಬೆಂಕಿ ನಿಂದಿಸುವ ಸಲಕರಣೆಗಳನ್ನು ಇರದೇ ಇರುವುದರಿಂದ ಮುಂದಿನ ಸೂಕ್ತ ಕ್ರಮಕ್ಕಾಗಿ ಜಿಲ್ಲಾ ಅಗ್ನಿ ಶಾಮಕ ಅಧಿಕಾರಿಗಳು ಕರ್ನಾಟಕ ರಾಜ್ಯ ಅಗ್ನಿ ಶಾಮಕ ದಳ ಮತ್ತು ತುರ್ತು ಸೇವೆಗಳು ರಾಯಚೂರು ಇವರಿಗೆ ಸೂಚಿಸಲಾಗಿದೆ ಎಂದರು.

ಎಲ್ಲಾ ಹೋಟೆಲ್, ಬಾರ್ & ರೆಸ್ಟೋರೆಂಟ್ ಮತ್ತು ಇತರೆ ಆಹಾರ ತಯಾರಿಸುವ ಮಾರಾಟ ಮಾಡುವವರು ತಪ್ಪದೇ ಆಹಾರ ಸುರಕ್ಷತ ನಿಯಮಗಳನ್ನು ಪಾಲಿಸಿ ಅಗತ್ಯ ಗುಣಮಟ್ಟ ಆಹಾರವನ್ನು ಸಾರ್ವಜನಿಕರಿಗೆ ನೀಡತಕ್ಕದ್ದು, ಹಾಗೂ ಎಲ್ಲಾ ವ್ಯಾಪಾರಸ್ಥರು, ಹೋಟೇಲ್‌ದಾರರು ತಪ್ಪದೇ ನಿಯಮಾನುಸಾರ ಸಂಬಂಧಿಸಿದ ಇಲಾಖೆಗಳಿಂದ ವಾಣಿಜ್ಯ ಪರವಾನಿಗೆ ಮತ್ತು ಆಹಾರ ಸುರಕ್ಷತ ಪರವಾನಿಗೆಯನ್ನು ಅಥವಾ ನೋಂದಣಿ ಮಾಡಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹ್ಮದ್, ತಹಶೀಲ್ದಾರ್ ವಾಯೀದ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್, ತಾಲೂಕ ಆರೋಗ್ಯಾಧಿಕಾರಿ ಡಾ.ಶರಣಬಸವ, ಆಹಾರ ಸುರಕ್ಷತಾ ಇಲಾಖೆಯ ಅಧಿಕಾರಿ ಬನದೇಶ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ನಗರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಕ್ಕೆ ಪಾಲಿಕೆ ಆಯುಕ್ತ ಜುಬಿನ್ ಮೊಹೊಪಾತ್ರ ಭೇಟಿ, ಪರಿಶೀಲನೆ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.17–** ರಾಯಚೂರು ನಗರವನ್ನು ಸುಂದರ ನಗರವನ್ನು ರೂಪಿಸುವ ನಿಟ್ಟಿನಲ್ಲಿ ಈಗಾಗಲೇ ರಾಯಚೂರು ಮಹಾನಗರ ಪಾಲಿಕೆಯ ಪರಿಸರ ವಿಭಾಗದಿಂದ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಕ್ಕೆ ಮಂಗಳವಾರ ದಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಭೇಟಿ ನೀಡಿ ಪರಿಶೀಲನೆ ಮಾಡಿದರು.

ನಗರದ ಸೌಂದರ್ಯೀಕರಣಗಳ ವಿವಿಧ ಸ್ಥಳಗಳನ್ನು ಮತ್ತು ವಿವಿಧ ವೃತ್ತಗಳನ್ನು ವರದಿಯನ್ನು ಪರಿಶೀಲಿಸಲು ನಗರಾದ್ಯಂತ ಪರಿಶೀಲನೆ ಕೈಗೊಂಡು ನಗರದ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಭವಿಷ್ಯದ ಸುಂದರೀಕರಣ ಯೋಜನೆಗಳ ಸಿದ್ಧತೆ ಮತ್ತು ಯೋಜನಾ ಸಿದ್ಧತೆಗಾಗಿ ಪರಿಶೀಲಿಸಿ ಖಾತರಿ ಪಡಿಸುಕೊಳ್ಳಲಾಯಿತು.

ಈ ವೇಳೆ ಅಧಿಕಾರಿಗಳ ತಂಡದೊಂದಿಗೆ ಅಂಬೇಡ್ಕರ್ ವೃತ್ತ, ನಗರ ಬಸ್ ನಿಲ್ದಾಣ, ಆರ್.ಟಿ.ಓ ವೃತ್ತ, ರಾಮ ಮಂದಿರ ಕಲ್ಯಾಣಿ ಮತ್ತು ರೈಲ್ವೇ ನಿಲ್ದಾಣ ವೃತ್ತ ಸೇರಿದಂತೆ ನಗರದ ಪ್ರಮುಖ ಜಂಕ್ಷನ್ಗಳಿಗೆ ಭೇಟಿ ನೀಡಿ, ಈ ಸ್ಥಳಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾದ ಸುಂದರೀಕರಣ, ಗೋಡೆ ಚಿತ್ರಕಲೆ (ವಾಲ್ ಪೇಂಟಿಂಗ್) ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಯೋಜನೆಯ ಕುರಿತು ಚರ್ಚಿಸಲಾಯಿತು.

ಈ ವೇಳೆ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಮಾತನಾಡಿ, ನಗರದ ಪ್ರಮುಖ ಸ್ಥಳಗಳನ್ನು ಸುಂದರವಾಗಿ ಮಾರ್ಪಡಿಸುವ ಸಲುವಾಗಿ ವ್ಯವಸ್ಥಿತ ಯೋಜನೆ ರಚಿಸಲು ಈ ಭೇಟಿಯನ್ನು ನಡೆಸಲಾಗಿದೆ. ನಾವು ಈ ಸ್ಥಳಗಳಿಗೆ ಸಂಬಂಧಿಸಿದ ವಿವರವಾದ ಯೋಜನೆಗಳನ್ನು ರೂಪಿಸುತ್ತಿದ್ದೇವೆ. ಮತ್ತು ಶೀಘ್ರದಲ್ಲೇ ಕಾರ್ಯಗಳನ್ನು ಪ್ರಾರಂಭಿಸಲು ತಯಾರಿ ನಡೆಸುತ್ತಿದ್ದೇವೆ ಎಂದು ಹೇಳಿದರು.

ನಂತರ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಕಾಮಗಾರಿಗೆ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿ, ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಪಿಡಬ್ಲ್ಯೂಡಿ ಇಲಾಖೆ ಮತ್ತು ಆರ್.ಡಿ.ಎ ಜಂಟಿ ಪ್ರಯತ್ನದಿಂದ ವೃತ್ತದ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಕೋಟೆಯ ಪುನಃಸ್ಥಾಪನೆ ಕಾರ್ಯವು ಒಂದು ತಿಂಗಳಿಗೂ ಹೆಚ್ಚು ಕಾಲ ನಡೆಯುತ್ತಿದ್ದು, ಅದು ಮುಕ್ತಾಯಗೊಳ್ಳುವ ಹಂತದಲ್ಲಿದೆ. ಮತ್ತು ಶೀಘ್ರದಲ್ಲೇ ವರ್ಣರಂಜಿತ ಬೆಳಕಿನೊಂದಿಗೆ ಸಾರ್ವಜನಿಕರಿಗೆ ಮುಕ್ತವಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಪರಿಸರ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರಾದ ಜೈಪಾಲ್ ರೆಡ್ಡಿ, ವಲಯ ಆಯುಕ್ತರಾದ ಮಲ್ಲಿಕಾರ್ಜುನ, ಕಾರ್ಯಪಾಲಕ ಅಭಿಯಂತರಾದ ಬಸವರಾಜ ಹೆಬ್ಬಾಳ, ಸಹಾಯಕ ಅಭಿಯಂತರರಾದ ಮಹೇಶ ಸೇರಿದಂತೆ ಪಾಲಿಕೆಯ ವಿವಿಧ ತಾಂತ್ರಿಕ ವಿಭಾಗಗಳ ಹಿರಿಯ ಮತ್ತು ಕಿರಿಯ ಅಧಿಕಾರಿಗಳು ಇದ್ದರು.

## ಹಿಪ್ಪರಗಿಯಲ್ಲಿ ಸಂಭ್ರಮದ ಗ್ರಾಮದೇವತೆ ಉತ್ಸವ

**ಕಲಬುರಗಿ,ಡಿ.17–** ಜಿಲ್ಲೆಯ ಜೇವರಗಿ ತಾಲೂಕಿನ ಹಿಪ್ಪರಗಿ ಎಸ್.ಎನ್ ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀದೇವಿ( ದ್ಯಾವಮ್ಮ) ದೇವಿಯ ಜಾತ್ರೆ ಅದ್ದೂರಿಯಾಗಿ ಜರುಗಿತು.

ಹಿಂದಿನ ದಿನ ರಾತ್ರಿ ಸ್ಥಳಿಯ ಕಲಾವಿದರಿಂದ ಅಹೋ ರಾತ್ರಿ ಭಜನೆ ಮಾಡುವುದರೊಂದಿಗೆ ಜಾಗಣೆ ಮಾಡಿ ಬೆಳಿಗ್ಗೆ ವಿಶೇಷ ಪೂಜೆಯೊಂದಿಗೆನಂತರ ಸಿಂಗರಿಸಿದ ಅಲಂಕಾರಗೊಂಡ ರಥದಲ್ಲಿ ದೇವಿಯ ಮೂರ್ತಿಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಊರ ಹೊರ ವಲಯದಲ್ಲಿರುವ ಭಾವಿಯಲ್ಲಿ ಗಂಗಾಸ್ನಾನ ನಂತರ ಸರ್ಜೆಗೌಡ ಮಾಲಿ ಪಾಟೀಲರ ಮನೆಯಿಂದ ತಂದ ಸೀರೆ ಆಭರಣಗಳು ತೊಡಿಸಿ ಉಡಿ ತುಂಬಿ ವಿಶೇಷ ಪೂಜೆ ಮಹಾ ಮಂಗಳಾರತಿಯೊಂದಿಗೆ ಗ್ರಾಮದ ಗೌರಿ ಶಂಕರ ದೇವಸ್ಥಾನದ ಪಕ್ಕದಲ್ಲಿರುವ ನಡೂರ ಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ಮಹೂರ್ತಮಾಡಿದಳು

ನಂತರ ಊರ ಜನರೆಲ್ಲ ಕಾಯಿ, ಕರ್ಪೂರ, ನೈವಿದ್ಯ, ಹರಕೆ ತಿರಿಸಿದರು. ಕೆಲವರು ಉಡಿ ತುಂಬಿದರುಮತ್ತೆ ಕೆಲ ಭಕ್ತರು ಹರಕೆಯಂತೆ ದೀಡು ನಮಸ್ಕಾರ ಹಾಕಿದರು.

ರಾತ್ರಿ ನಡೂರ ಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ವಿಜಯಪುರ



ಜಿಲ್ಲೆಯ ಇಂಡಿ ತಾಲೂಕಿನ ಲಚ್ಯಾಣ ಗ್ರಾಮದ ಶ್ರೀ ಸಿದ್ದಲಿಂಗೇಶ್ವರ ನಾಟ್ಯ ಸಂಘದಿಂದ ರೇಣುಕಾ ಎಲ್ಲಮ್ಮ ಮಹಾತ್ಮೆ ಬೈಲಾಟ ಪ್ರದರ್ಶನವಾಯಿತು. ದೇವಿಯ ರಥವು ಭವ್ಯ ಮೆರವಣಗೆಯೊಂದಿಗೆ ಮತ್ತೆ ಶ್ರೀ ದೇವಿಯು ತನ್ನ ಮೂಲ ಸ್ಥಾನದಲ್ಲಿ ಪ್ರತಿಷ್ಠಾನಗೊಳ್ಳುವದರೊಂದಿಗೆ ಉತ್ಸವ ಸಂಪನ್ನಗೊ ಳ್ಳುವದು. ಜಾತ್ರೆಯ ನಿಮಿತ್ತ ಯಾವುದೇ ಕೃಷಿ ಚಟುವಟಿಕೆ ನಡೆಯುದಿಲ್ಲ ರೈತರಿಗೆ ಹಾಗೂ ಎತ್ತುಗಳಗೆ ರಜೆ. ಪ್ರತಿ ವರ್ಷ ಎಳ್ಳಾಮವಾಸ್ಯೆಗೆ ಮೊದಲು ಬರುವ ಮಂಗಳವಾರ ಅಥವಾ ಶುಕ್ರವಾರ ಉತ್ಸವ ನಡೆಯುವದು ಎಂದು ಗುರುರಾಜ.ಕೆ.ಪಟ್ಟಣಶೆಟ್ಟಿ ತಿಳಿಸಿದ್ದಾರೆ

## ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಕೆ

ಆದೇಶದಂತೆ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದ್ದು ಮುಂದಿನ ಆದೇಶದವರಗೆ ಅರಣ್ಯ ಭೂಮಿ ಸಾಗುವಳಿಯಿಂದ ತೆರೆಗೊಳಿಸುವುದನ್ನು ತಕಲ್ಷಣ ನಿಲ್ಲಿಸಬೇಕು. ಸರಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುವ ಕುಟುಂಬಗಳನ್ನು ಸಕ್ರಮಗೊಳಿಸಿ 94–ಸಿಮತ್ತು 94–ಸಿಸಿ ಅಡಿಯಲ್ಲಿ ಹಕ್ಕು ಪತ್ರ ನೀಡಬೇಕು ಹಾಗೂ ಅರಣ್ಯ ಹಕ್ಕುಗಳ ಅಧಿನಿಯಮ–2006ರ ಅನ್ವಯದಂತೆ ಅರಣ್ಯ ಪ್ರದೇಶದಲ್ಲಿ ನೆಲೆಸಿರುವ ಕುಟುಂಬಗಳನ್ನು ಸಕ್ರಮಗೊಳಿ ಹಕ್ಕು ಪತ್ರ ನೀಡಬೇಕು. ಗ್ರಾಮ ಪಂಚಾಯತಿಗಳಿಗೆ ವಸತಿ ರಹಿತ ಬಡವರು ನೀವೆಶ ಕೋಡಿ ಸಲ್ಲಿಸಿದ ಅರ್ಜಿಯ ಫಲಾನುಭವಿಗಳಿಗೆ ಭೂಮಿ ಗುರುತಿಸಿ ನಿವೇಶನ ನೀಡಬೇಕು ಹಾಗೂ ಅರಕೇರಾ ಗ್ರಾಮದ ಹೋರವಲಯದಲ್ಲಿ ಸರಕಾರಿ ಭೂಮಿ ಲಭ್ಯವಿದ್ದು ವಸತಿ ನಿವೇಶನಕ್ಕಾಗಿ 20–00 ಎಕರೆ ಭೂಮಿ ಮಂಜೂರು ಮಾಡಬೇಕು. ಸುವರ್ಣ ಗ್ರಾಮೋದಯ ಯೋಜನೆಯಡಿ ಆಯ್ಕಾಯಾದ ಕ್ಯಾದಿಗ್ಗೇರಾ ಗ್ರಾಮದ ವಸತಿಗಾಗಿ ಗುರುತಿಸಲಾದ ಭೂಮಿಯಲ್ಲಿ ವಸತಿ ಬಡವಾನೆ ರಚಿಸಿ ನಿವೇಶನ ಹಂಚಿಕೆಮಾಡಬೇಕು. ನಾಗೋಲಿ ಮತ್ತು ಚಿಂತಲಕುಂಟಾಗ್ರಾಮದ ವಸತಿ ನಿವೇಶನಕ್ಕಾಗಿ ಮುಂಜೂರಾದ ಸರಕಾರಿ ಭೂಮಿಯಲ್ಲಿ ವಸತಿ ಬಡಾವಣೆ ರಚಿಸಿ ನಿವೇಶನ ರಹಿತ ಬಡವರಿಗೆ ಹಂಚಿಕೆಮಾಡಬೇಕು.ಶೇ.100ರಷ್ಟು ಪರಿಶಿಷ್ಟರು ನೆಲೆಸಿರುವಕೊತ್ತದೊಡ್ಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕರಡೋಣ ಗ್ರಾಮವನ್ನು ಸಮಗ್ರ ಮೂಲಭೂತಸೌಕರ್ಯಗಳೊಂದಿಗೆ ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿ ಪಡಿಸಬೇಕು. ಗ್ರಾಮ ಪಂಚಾಯತಿ ಮಟ್ಟದಲ್ಲಿ ಸ್ವಚ್ಚತಾ ವಾಹನಗಳ ಚಾಲಕಿಯರ ಹಾಗೂ ಸಹಾಯಕಿಯರ ಬಾಕಿ ವೇತನ ಪಾವತಿಸಬೇಕು ಹಾಗೂ ಚಾಲಕಿಯರಿಗೆ ರೂ6000ಹಾಗೂ ಸಾಹಯಕಿಯರಿಗೆ ರೂ.4500ರವರಗೆ ಕನಿಷ್ಠ ಗೌರವಧನ ಹೆಚ್ಚಿಸಬೇಕು. ದಿನಾಂಕ 23–12–2025 ರಂದು ಮಂಗಳವಾರ ಬೆಳಿಗ್ಗೆ 11ಗಂಟೆಗೆ ತಹಶೀಲ್ದಾರ ಕಾರ್ಯಲಯದ ಮುಂದೆ ಬೃಹತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರೋ.ಬಿ.ಕೃಷ್ಣಪ್ಪನವರು ಸ್ಥಾಪಿಸಿದ ಕರ್ನಾಟಕದಲಿತ ಸಂಘರ್ಷಸಮಿತಿ(ರಿ) ರಾಜ್ಯ ಸಂಘಟನಾ ಸಂಚಾಲಕರಾದ ಹನುಮಂತಪ್ಪ ಕಾಕರಗಲ್ ಇವರು ಮನವಿ ಪತ್ರಸಲ್ಲಿಸಿ ಒತ್ತಾಯಿಸಿದ್ದಾರೆ.

ಸಂದರ್ಭದಲ್ಲಿ ಶಿವಪ್ಪ ಪಲಕನಮರಡಿ ತಾಲೂಕ ಸಮಚಾಲಕರು ಶಿವರಾಜ ಕೊರಿ ತಾಲೂಕು ಸಂಚಾಲಕರು ನಾಗರಾಜದೇವರಮನೆ ತಾಲೂಕು ಸಂ ಸಂಚಾಲಕರು ಶಿವಪ್ಪ ಕ್ಯಾದಿಗ್ಗೇರಾ,ಚೆನ್ನಮ್ಮ ರವಿಕುಮಾರ ಸಲಿಂಸಾಬ ಅಂಜನೇಯ್ಯ ಸೇರಿದಂತೆ ಇನ್ನಿತರರು ಇದ್ದರು.

# ಮೇಲಲನೆಯಲ್ಲಿ ಆಡಳಿತ ಪಕ್ಷದ ಸದಸ್ಯರ ಗೈರು : ಪ್ರತಿಪಕ್ಷಗಳ ಸದಸ್ಯರ ವಾಗ್ದಾಳಿ



**ಬೆಳಗಾವಿ,ಡಿ.17–** ಪ್ರಶ್ನೋತ್ತರ ಸಂದರ್ಭದಲ್ಲಿ ಆಡಳಿತ ಪಕ್ಷದ ಸಾಲಿನಲ್ಲಿ ಇಬ್ಬರೇ ಇಬ್ಬರು ಸದಸ್ಯರು ಆಸೀನರಾಗಿದ್ದರಿಂದ ಕೆರಳಿ ಕೆಂಡವಾದ ಪ್ರತಿಪಕ್ಷಗಳ ಸದಸ್ಯರು ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ ಸದನವನ್ನು ಕೆಲಹೊತ್ತು ಮುಂದೂಡಿದ ಪ್ರಸಂಗ ವಿಧಾನಪರಿಷತ್‌ನಲ್ಲಿ ಜರುಗಿತು.

ಬೆಳಗ್ಗೆ ಕಲಾಪ ಆರಂಭವಾಗುತ್ತಿ ದ್ದಂತೆ ಉಪಸಭಾ ಪತಿ ಪೀಠದಲ್ಲಿ ಆಸೀನರಾಗಿದ್ದ ಉಪಸಭಾಪತಿ ಎಂ.ಕೆ.ಪ್ರಾಣೇಶ್ ಅವರು, ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭಿಸಲು ಮುಂದಾದರು. ಈ ವೇಳೆ ಆಡಳಿತ ಪಕ್ಷದಿಂದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಸದಸ್ಯರಾದ ರಾಮೋಜಿ ಗೌಡ ಹಾಗೂ ಶಿವಕುಮಾರ್ ಮಾತ್ರ ಹಾಜರಿದ್ದರು.

ಪ್ರಶ್ನೋ?ತ್ತರ ಅವಧಿಯನ್ನು ಪ್ರಾರಂಭಿಸಲು ಮುಂದಾಗುತ್ತಿದ್ದಂತೆ ಜೆಡಿಎಸ್?ನ ಭೋಜೇಗೌಡ ಅವರು ಸರ್ಕಾರಕ್ಕೆ ಸದನ ನಡೆಸುವ ಇಚ್ಛೆ ಇದೆಯೋ ಇಲ್ಲವೋ ಗೊತ್ತಿಲ್ಲ. ಸಭಾಪತಿಗಳು 10 ಗಂಟೆಗೆ ಸದನ ಆರಂಭವಾಗುತ್ತದೆ ಎಂದು ಹೇಳಿದ್ದರು. ಅಲ್ಲದೆ ಹಕ್ಕುಚ್ಯುತಿ ಪ್ರಕರಣ ಸಂಬಂಧ ಸಭಾಪತಿಗಳು ಸರ್ಕಾರಕ್ಕೆ ತೆಗೆದುಕೊಂಡ ಕ್ರಮಗಳ ಬಗ್ಗೆ ಸದನಕ್ಕೆ ಮಾಹಿತಿ ನೀಡಬೇಕೆಂದು ಸೂಚಿಸಿದ್ದಾರೆ. ಆದರೆ ಸದನದಲ್ಲಿ ಕೇವಲ ಓರ್ವ ಸಚಿವರು, ಇಬ್ಬರು ಸದಸ್ಯರು ಮಾತ್ರ ಇದ್ದಾರೆ.

ಇದು ಇಡೀ ಸದನಕ್ಕೆ ಮಾಡಿ ಅಗೌರವ. ಸಭಾಪತಿಗಳ ಪೀಠಕ್ಕೂ ಸರ್ಕಾರದಿಂದ ಅವಮಾನವಾಗಿದೆ. ಇದೊಂದು ಬೇಜವಾಬ್ದಾರಿ ಸರ್ಕಾರ ಎಂದು ವಾಗ್ದಾಳಿ ನಡೆಸಿದರು. ಬಿಜೆಪಿ ಸದಸ್ಯ ರವಿಕುಮಾರ್ ಮಾತನಾಡಿ, ಸತೀಶ್ ಜಾರಕಿಹೊಳಿ ಒಬ್ಬರೇ ಇದ್ದಾರೆ. ಹಾಗಾಗಿ ನಮ ಜೊತೆ ಇದ್ದಾರೆ ಎಂದು ಕಾಲೆಳೆದರು.

ವಿಧಾನಪರಿಷತ್‌ನ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ಸರಕಾರ ಬೇಜವಾಬ್ದಾರಿ ಸಹಿಸುವುದಿಲ್ಲ. ಸದನಕ್ಕೆ ಸಚಿವರು, ಸದಸ್ಯರು ಬಾರದೆ ಸರಕಾರ ಕಾಲಹರಣ ಮಾಡುತ್ತಿದೆ. ಸಭಾನಾಯಕರು ಇಲ್ಲ, ಸದಸ್ಯರೂ ಇಲ್ಲ. ಸರಕಾರ ಬೇಜವಾಬ್ದಾರಿ ಕೆಲಸ ಮಾಡುತ್ತಿದೆ. ಜನರಿಂದ ಛೀಮಾರಿ ಹಾಕಿಸಿಕೊಂಡು ಹೋಗುವ ಕಾಲ ಬಂದಿದೆ ಎಂದು ವ್ಯಂಗ್ಯವಾಡಿದರು.

ಕ್ಷುಲ್ಲಕ ಕಾರಣಗಳಾಗಿ ಸರಕಾರ ಈ ರೀತಿ ನಡೆದುಕೊಳ್ಳಬಾರದು. ಸರಕಾರದ ನಡೆಯನ್ನು ಖಂಡಿಸುತ್ತೇವೆ. ಉತ್ತರಕರ್ನಾಟಕವನ್ನು ಸರಕಾರ ಸಂಪೂರ್ಣ ನಿರ್ಲಕ್ಷ ಮಾಡುತ್ತಿದೆ ಎಂದು ಇದೇ ವೇಳೆ ಅವರು ಆಕ್ರೋಶ ವ್ಯಕ್ತಪಡಿಸಿದರು. ಸರಕಾರ ನಾಪತ್ತೆಯಾಗಿದೆ, ಕಳೆದುಹೋಗಿದೆ. ಹುಡುಕಿಕೊಡಿ ಎಂದು ಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಬೇಕಾಗುತ್ತದೆ ಎಂದರು. ಈ ವೇಳೆ ಬಿಜೆಪಿ ಸದಸ್ಯರೆಲ್ಲರೂ ಸರಕಾರಕ್ಕೆ ಧಿಕ್ಕಾರ ಕೂಗಿದರು.

ಉತ್ತರಕರ್ನಾಟಕಕ್ಕೆ ಅಪಮಾನ ಮಾಡುತ್ತಿದೆ. ಉತ್ತರಕರ್ನಾಟಕದ ಪಾಲಿಗೆ ಸರಕಾರ ಸತ್ತುಹೋಗಿದೆ ಎಂದು ಸರಕಾರ ವಿರುದ್ಧ ಬಿಜೆಪಿ , ಜೆಡಿಎಸ್ ಸದಸ್ಯರು ಧಿಕ್ಕಾರ ಕೂಗಿದರು. ಸಚಿವರ ಅಲಭ್ಯತೆ ಕಾರಣದಿಂದಾಗಿ ಸದನವನ್ನು 10 ನಿಮಿಷ ಮುಂದೂಡಲಾಯಿತು.

## ನಕಲಿ ಪಾನ್‌ಕಾರ್ಡ್ ಬಳಿಸಿ ಜನರ ಆಸ್ತಿ ಲಪಟಾಯಿಸುತ್ತಿರುವುದರ ಕುರಿತು ಎಳೆಎಳೆಯಾಗಿ ವಿವರಿಸಿದ ಸಚಿವ ಕೃಷ್ಣಭೈರೇಗೌಡ



**ಬೆಳಗಾವಿ,ಡಿ.17–** ರಾಜ್ಯದಲ್ಲಿ ನಕಲಿ ಪಾನ್‌ಕಾರ್ಡ್ ಬಳಸಿಕೊಂಡು ಬೇರೆಯವರು ಹೇಗೆ ಜನರ ಆಸ್ತಿಯನ್ನು ಲಪಟಾ ಯಿಸುತ್ತಾರೆ ಎಂಬುದರ ಬಗ್ಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ವಿಧಾನಪರಿಷತ್‌ನಲ್ಲಿ ಎಳೆಎಳೆಯಾಗಿ ವಿವರಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಡಿ.ಎಸ್. ಅರುಣ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಶೇ.98.90 ಜನರ ಬಳಿ ಆಧಾರ್ ಕಾರ್ಡ್‌ಗಳಿವೆ. ಇದೇ ಸಂದರ್ಭದಲ್ಲಿ ಶೇ.46ರಷ್ಟು ಮಂದಿ ನಕಲಿ ಪಾನ್‌ಕಾರ್ಡ್ ಹೊಂದಿದ್ದಾರೆ ಎಂದು ತಿಳಿಸಿದರು.

ಹಿಂದೆ ಆಧಾರ್, ಪಾನ್ ,ಪಾಸ್ ಪೋರ್ಟ್ ನಲ್ಲಿ ಯಾವುದಾದರೂ ಒಂದು ಇದ್ದರೆ ಸಾಕಿತ್ತು. ಆದ್ರೆ ಪಾನ್ ಕಾರ್ಡ್ ಕೊಟ್ಟಾಗ ಐಟಿ ಅವರು ಒಪ್ಪಲಿಲ್ಲ. ಕೆಲವರು ನಕಲಿ ಕಾರ್ಡ್ ಕೊಟ್ಟರು. ಹೀಗಾಗಿ ಮೋಸ ತಡೆಯಲು ಬಯೋಮೆಟ್ರಿಕ್ ಕಡ್ಡಾಯ ಮಾಡಲಾಗಿದೆ. ಕೆಲವರಿಗೆ ಇದು ಸಮಸ್ಯೆಯಾಗಿದೆ. ಎಲ್ಲಾ ಮಾಲಿಕತ್ವಕ್ಕೆ ಆಧಾರ್ ಇಂಟಿಗ್ರೇಟೆಡ್ ಮಾಡಬೇಕಿದೆ.

ಇವತ್ತು ಯಾವ ಕಾರ್ಡ್ ಬೇಕಾದರೂ ನಕಲಿ ಮಾಡಬಹುದು. ಕೆಲವರ ಖಾತೆ ಆಗ್ತಿಲ್ಲ, ಒಪ್ಪುತ್ತೇನೆ. ಆದರೆ ಕೆಲವೊಂದನ್ನು ಬದಲಾವಣೆ ಮಾಡಿದಾಗ ಜನ ನಮ ಮೇಲೆ ಆರೋಪ ಮಾಡುತ್ತಾರೆ.

ವಿಭಾಗ ಪತ್ರ ಮಾಡಬೇಕಾದವರು ಲೋಕಲ್ ಸಂಸ್ಥೆಯವರು. ಅಲ್ಲಿ ವಿಭಾಗಪತ್ರ ಮಾಡಿಸಿಕೊಳ್ಳದೇ ರಿಜಿಸ್ಟರ್ ಮಾಡಿ ಅನ್ನುತ್ತಾರೆ. ಇಂತಹದ್ದನ್ನೆಲ್ಲಾ ನಾವು ಬಂದ್ ಮಾಡಿದ್ದೇವೆ. ಇದು ಕೆಲವರಿಗೆ ಅಸಮಾಧಾನ ಇರಬಹುದು.

ಲೋಪಗಳನ್ನು ಸರಿ ಮಾಡಿರುವುದಕ್ಕೆ ನಮ ಮೇಲೆ ಈ ರೀತಿಯ ಆರೋಪವಿದೆ. ಇದು ಕಾವೇರಿಯ ಸಮಸ್ಯೆ ಅಲ್ಲ. ಸರ್ವರ್ ಸಮಸ್ಯೆಯೂ ಇದೆ. ಅದನ್ನು ಒಪ್ಪಿಕೊಳ್ಳುತ್ತೆ?ವೆ. ಮುಂದೆ ಸರಿಯಾಗಲಿದೆ ಎಂದು ಸಚಿವರು ಹೇಳಿದರು.

ಇದಕ್ಕೂ ಮುನ್ನ ಮಾತನಾಡಿದ ಡಿ.ಎಸ್ ಅರುಣ್ ಅವರು, ಕಾವೇರಿ ಆನ್‌ಲೈನ್ ಸರ್ವೀಸ್ ಪ್ರಾರಂಭವಾದ ಬಳಿಕ ವಿಭಾಗ ಪತ್ರ, ದಾನಪತ್ರ ನೋಂದಣಿ ಪ್ರಕ್ರಿಯೆ ವಿಳಂಬವಾಗಿದೆ. ಏನೇ ಇದ್ದರೂ ಸರ್ವರ್ ಸಮಸ್ಯೆ ಅನ್ನುತ್ತಾರೆ. ಸಾಫ್ಟ್‌ವೇರ್ ಯುಗದಲ್ಲಿ ಸರ್ವರ್ ಕೆಪಾಸಿಟಿ ಹೆಚ್ಚಿಸಿ, ವಯಸ್ಸಾದವರು ಬಯೋಮೆಟ್ರಿಕ್ ಸಮಸ್ಯೆ ಎದುರಿಸುತ್ತಿದ್ದಾರೆ. ಅಂಥವರಿಗೆ ಆಧಾರ್ ಅಥವಾ ಪಾನ್ ಬಳಸಿ ಎಂದು ಸಚಿವರಲ್ಲಿ ಮನವಿ ಮಾಡಿದರು

## ಅಪರಾಧ ತಡೆಗಟ್ಟುವಿಕೆ ಮಾಸ ಆಚರಣೆ

**ಕಲಬುರಗಿ,ಡಿ.17–** ಅಪರಾಧ ತಡೆಗಟ್ಟುವಿಕೆ ಮಾಸ 2025 ಮತ್ತು ಅಂತರರಾಷ್ಟ್ರೀಯ ಮಾದಕ ದ್ರವ್ಯ ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನದ ಕುರಿತು ಜಾಗೃತಿ ಅಧಿವೇಶನವನ್ನು ನಗರದ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಎಸಿಪಿ ಶರಣಬಸಪ್ಪ ಸುಬೇದಾರ ಮತ್ತು ಸಿಪಿಐ ಮಹಾಂತೇಶ್ ಪಾಟೀಲ್ ಅವರು ಮಾತನಾಡಿ ವಿದ್ಯಾರ್ಥಿಗಳಿಗೆ ಅಮೂಲ್ಯವಾದ ಪ್ರಮುಖ ವಿಷಯಗಳನ್ನು ಮತ್ತು ಉತ್ತಮವಾಗಿ ರಚನಾತ್ಮಕ ಜಾಗೃತಿ ನೀಡಿದರು.

ಕಾಲೇಜು ಪ್ರಾಂಶುಪಾಲ ಆಶಿಕ್ ರೆಡ್ಡಿ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ ಸಾಮಾಜಿಕವಾಗಿ ಜವಾಬ್ದಾರಿಯುತ ಮತ್ತು ಕಾನೂನು ಪಾಲಿಸುವ ನಾಗರಿಕರನ್ನು ರೂಪಿಸುವಲ್ಲಿ ಇಂತಹ ಜಾಗೃತಿ ಕಾರ್ಯಕ್ರಮಗಳ ಮಹತ್ವವನ್ನು ಎತ್ತಿ ತೋರಿಸಿದರು. ಕಿರಣ್



ಬಿ ಕಾರ್ಯಕ್ರಮ ಆಯೋಜಿಸಿದರು.

ಅಜಯ್‌ಕುಮಾರ್ ಶೆಟ್ಟಿ, ಸುದರ್ಶನ್ ಸ್ವಾಮಿ, ಶರಣ್ ಎಸ್ ಸಿ, ಕೃಷ್ಣಕುಮಾರ್, ಆಕಾಶ್ ಕುಲಕರ್ಣಿ, ಬಸವರಾಜ್ ಹಿರೇಮಠ, ಬಸಯ್ಯ ಸ್ವಾಮಿ, ರಾಜಶೇಖರ್ ಹವಾಲ್ದಾರ್, ಪ್ರಭಾ ಹೂಗರ್, ಬಂದಾನ ಚಟರ್ಜಿ, ವಿವೇಕ್ ಹೆಚ್, ಮತ್ತು ಹೀನಾ ಸೇರಿದಂತೆ ಹಲವಾರು ಅಧ್ಯಾಪಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಅಲೋಕ್ ಕಾರ್ಯಾಚರಣೆ ಬೆನ್ನಲ್ಲೇ ಬೆಚ್ಚಿಬಿದ್ದ ಖೈದಿಗಳು



**ಬೆಂಗಳೂರು,ಡಿ.17–** ಕಾರಾಗೃಹಗಳಲ್ಲಿನ ಅಕ್ರಮಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಎಐ ತಂತ್ರಜ್ಞಾನ ಬಳಕೆ ಮಾಡಲು ಕಾರಾಗೃಹಗಳ ಡಿಜಿಪಿ ಅಲೋಕ್‌ಕುಮಾರ್ ಅವರು ಚಿಂತನೆ ಮಾಡುತ್ತಿದ್ದಾರೆ. ಜೈಲುಗಳಲ್ಲಿ ಮೊಬೈಲ್ ಬಳಕೆ, ಮಾದಕ ವಸ್ತುಗಳ ಸಾಗಾಣೆ ಹಾಗೂ ಇನ್ನಿತರ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಎಐ ತಂತ್ರ ಜ್ಞಾನ ಪ್ರಮುಖ ಪಾತ್ರ ವಹಿಸಲಿದೆ ಎಂಬುದು ಅವರಿಗೆ ಮನವ ರಿಕೆಯಾಗಿದೆ.

ಕಾರಾಗೃಹ ಸಿಬ್ಬಂದಿಯ ಬೇಜವಾಬ್ದಾರಿ ಮತ್ತು ಲೋಪಗಳನ್ನು ತಪ್ಪಿಸುವ ಸಲುವಾಗಿ ಎಐ ತಂತ್ರಜ್ಞಾನ ಬಳಕೆ ಮಾಡಿದರೆ ಸುಲಭವಾಗಿ ಅಕ್ರಮ ಪತ್ತೆಹಚ್ಚಲು ಸಹಕಾರಿಯಾಗಲಿದೆ ಎಂಬುದು ಅವರಿಗೆ ಗೊತ್ತಾಗಿದೆ. ಹಾಗಾಗಿ ಎಐ ತಂತ್ರಜ್ಞಾನ ಬಳಕೆ ಮಾಡಲು ಚಿಂತಿಸಲಾಗುತ್ತಿದೆ.

ಜೈಲುಗಳಿಗೆ ಗಾಂಜಾ, ಮೊಬೈಲ್ ಸಾಗಾಣೆಯಂತಹ ಅಕ್ರಮ ಚಟುವಟಿಕೆಗಳ ಸಂಪೂರ್ಣ ಜಾಲವನ್ನು ಭೇದಿಸುವುದು ಅವರ ಮುಖ್ಯ ಗುರಿಯಾಗಿದೆ.ಕಾರಾಗೃಹಗಳ ಡಿಜಿಪಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಅಲೋಕ್‌ಕುಮಾರ್ ಅವರು ಅಧಿಕಾರಿಗಳ ಸಭೆ ನಡೆಸಿ ಯಾವುದೇ ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆ ನಡೆಯಬಾರದು. ಜೈಲಿನೊಳಗೆ ಮಾದಕ ವಸ್ತುಗಳು, ಮೊಬೈಲ್ ಫೋನ್ ಹಾಗೂ ಇನ್ನಿತರ ವಸ್ತುಗಳು ಹೋಗದಂತೆ ನೋಡಿಕೊಳ್ಳಬೇಕು ಎಂದು ಖಡಕ್ ಸೂಚನೆ ನೀಡಿದ್ದರು.

ಒಂದು ವೇಳೆ ಕರ್ತವ್ಯ ಲೋಪವೆಸಗುವ ಅಧಿಕಾರಿ ಹಾಗೂ ಸಿಬ್ಬಂದಿ ವಿರುದ್ಧ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ಸಹ ನೀಡಿದ್ದರು.ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಕಾರಾಗೃಹಗಳಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗಿದ್ದು, ಕೈದಿಗಳು ಮತ್ತು ವಿಚಾರಣಾಧೀನ ಕೈದಿಗಳು ಅಲೋಕ್‌ಕುಮಾರ್ ಅವರ ಕಾರ್ಯಾಚರಣೆಯಿಂದ ಬೆಚ್ಚಿ ಬಿದ್ದಿದ್ದಾರೆ. ಸೋಮವಾರ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಭೇಟಿ ನೀಡಿದ ಅಲೋಕ್ ಕುಮಾರ್ ಅವರು ಬ್ಯಾರಕ್‌ಗಳು ಹಾಗೂ ಆಸ್ಪತ್ರೆ ಪರಿಶೀಲಿಸಿ ನಂತರ ಜೈಲಿನ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕೆಲವು ಸಲಹೆ-ಸೂಚನೆ ನೀಡಿದ್ದರು.

# ದೆಹಲಿಯಲ್ಲಿ ಮತ್ತಷ್ಟು ಹೆಚ್ಚಿದ ಅಪರಾಧ ಪ್ರಕರಣಗಳು




**ನವದೆಹಲಿ,ಡಿ.17–** ರಾಷ್ಟ್ರ ರಾಜಧಾನಿ ದೆಹಲಿಯ ಡಿಸೆಂಬರ್ ಮಾಹೆಯೊಂದರಲ್ಲೆ? ಅಪರಾಧ ಪ್ರಕರಣಗಳು ವೇಗವಾಗಿ ಹೆಚ್ಚಾಗಿದೆ. ಡಿಸೆಂಬರ್‌ನ ಮೊದಲ 15 ದಿನಗಳಲ್ಲಿ ರಾಜಧಾನಿಯಾದ್ಯಂತ ಕನಿಷ್ಠ 14 ಜನರು ಹತ್ಯೆಗೀಡಾಗಿದ್ದಾರೆ, ಈ ಹತ್ಯೆಗಳಲ್ಲಿ ಕನಿಷ್ಠ 17 ಅಪ್ರಾಪ್ತ ವಯಸ್ಕರು ಭಾಗಿಯಾಗಿದ್ದಾರೆ ಎಂದು ಪೊಲೀಸರು ಬಹಿರಂಗಪಡಿಸಿದ್ದಾರೆ.

ಬಲಿಪಶುಗಳಲ್ಲಿ ಒಬ್ಬ ಮಹಿಳೆ ಮತ್ತು ಅಪ್ರಾಪ್ತ ವಯಸ್ಕ ಸೇರಿದ್ದಾರೆ, ಮತ್ತು ರೋಹಿಣಿ, ಪೂರ್ವ ದೆಹಲಿ, ಶಹದಾರ, ಆಗ್ನೇಯ ದೆಹಲಿ ಮತ್ತು ಉತ್ತರ ದೆಹಲಿ ಸೇರಿದಂತೆ ನಗರದ ಹಲವು ಭಾಗಗಳಿಂದ ಈ ಘಟನೆಗಳು ವರದಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪ್ರಕರಣಗಳು ಹಣಕಾಸಿನ ವಿವಾದಗಳು ಮತ್ತು ದರೋಡೆಗಳಿಂದ ಹಿಡಿದು ಮಾರಕ ಹಿಂಸಾಚಾರಕ್ಕೆ ಕಾರಣವಾದ ಸಣ್ಣ ವಿಷಯಗಳ ಮೇಲಿನ ಹಠಾತ್ ಭುಗಿಲೆದ್ದವರೆಗೆ ವ್ಯಾಪಕ ಶ್ರೇಣಿಯ ಉದ್ದೇಶಗಳನ್ನು ಹೊಂದಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೊಲೀಸ್ ದತ್ತಾಂಶದ ಪ್ರಕಾರ, ಹಲವಾರು ಕೊಲೆಗಳು ಮಾರಕವಾಗಿ ಮಾರ್ಪಟ್ಟ ಕಳ್ಳತನದ ಪ್ರಯತ್ನಗಳು, ಬಲಿಪಶುಗಳು ವಿರೋಧಿಸಿದ ದರೋಡೆಗಳು, ವೈಯಕ್ತಿಕ ಸಂಬಂಧಗಳಿಂದ ಉಂಟಾಗುವ ವಿವಾದಗಳು ಮತ್ತು ಸುತ್ತಮುತ್ತಲಿನ ಸ್ವಚ್ಛತೆಯ ಬಗ್ಗೆ ವಾದಗಳು ಸೇರಿದಂತೆ ನೆರೆಹೊರೆಯ ಜಗಳಗಳಿಂದ ಹುಟ್ಟಿಕೊಂಡಿವೆ.

ಒಂದು ಪ್ರಕರಣದಲ್ಲಿ ಹಿರಿಯ ಸಹಚರರು ಬಲವಂತವಾಗಿ ಸುಲಿಗೆ ಅಥವಾ ಕಳ್ಳತನಕ್ಕೆ ಒತ್ತಾಯಿಸಿದ ನಂತರ ಅಪ್ರಾಪ್ತ ವಯಸ್ಕರು ಸೇಡು ತೀರಿಸಿಕೊಳ್ಳಲು ವರ್ತಿಸಿದ್ದಾರೆ. ಇದರಲ್ಲಿ ಯಾವುದೇ ಒಂದು ಮಾದರಿ ಇಲ್ಲ. ಹಲವು ಘಟನೆಗಳು ಪೂರ್ವಯೋಜಿತ ಅಪರಾಧಗಳಿಗಿಂತ ಹೆಚ್ಚಾಗಿ ಕೋಪ ಅಥವಾ ಪ್ರಚೋದನೆಯಿಂದ ಪ್ರಚೋದಿಸಲ್ಪಟ್ಟ ಹಠಾತ್ ಕೃತ್ಯಗಳಾಗಿ ಕಂಡುಬರುತ್ತವೆ ಎಂದು ಅಧಿಕಾರಿ ಹೇಳಿದ್ದಾರೆ.

ಡಿಸೆಂಬರ್ 15 ರಂದು ಈಶಾನ್ಯ ದೆಹಲಿಯಲ್ಲಿ ಇಬ್ಬರು ಸಹೋದರರರನ್ನು ಗುಂಡಿಕ್ಕಿ ಕೊಂದ ಒಂದು ಘಟನೆಯನ್ನು ಹೊರತುಪಡಿಸಿ, ಉಳಿದ ಎಲ್ಲಾ ಕೊಲೆಗಳು ಹರಿತವಾದ ಆಯುಧಗಳಿಂದ ಇರಿದ ಪ್ರಕರಣಗಳಾಗಿವೆ ಮುಖ್ಯವಾಗಿ ಚಾಕುಗಳಿಂದ ಎಂದು ಎಂದು ಪೊಲೀಸರು ತಿಳಿಸಿದ್ದಾರೆ.

ಆಟೋ-ರಿಕ್ಷಾ ಚಾಲಕರು ಮತ್ತು ದಿನಗೂಲಿ ಕಾರ್ಮಿಕರಿಂದ ಹಿಡಿದು ಮೊದಲ ವರ್ಷದ ಕಾನೂನು ವಿದ್ಯಾರ್ಥಿಯವರೆಗೆ ಸಾಮಾಜಿಕ-ಆರ್ಥಿಕ ರೇಖೆಗಳನ್ನು ಮೀರಿ ಬಲಿಪಶುಗಳ ಪ್ರೊಫೈಲ್ ಕಂಡುಬಂದಿದೆ. ಬಲಿಪಶುಗಳ ಪಟ್ಟಿಯಲ್ಲಿ ದೇವಾಲಯದ ಅರ್ಚಕರ ಪತ್ನಿಯೂ ಸೇರಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪ್ರಾಪ್ತ ವಯಸ್ಕರ ಪಾಲ್ಗೊಳ್ಳುವಿಕೆಯನ್ನು ಗಂಭೀರ ಕಳವಳಕಾರಿ ವಿಷಯ. ಕನಿಷ್ಠ 17 ಬಾಲಾಪರಾಧಿಗಳು ಹತ್ಯೆಗಳಲ್ಲಿ ಭಾಗಿಯಾಗಿದ್ದಾರೆ, ಅವರು ಪ್ರಮುಖ ಆರೋಪಿಗಳು ಅಥವಾ ಸಹಚರರು ಎಂದು ಕಂಡುಬಂದಿದೆ. ಹಲವಾರು ಪ್ರಕರಣಗಳಲ್ಲಿ, ಬಾಲಾಪರಾಧಿಗಳು ಕೇವಲ ಹಾಜರಿರಲಿಲ್ಲ, ಬದಲಾಗಿ ಮಾರಕ ಗಾಯಗಳನ್ನು ಉಂಟುಮಾಡುವುದು ಸೇರಿದಂತೆ ಹಲ್ಲೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ ಎಂದು ಹೇಳಿದ್ದಾರೆ.

ಅಪ್ರಾಪ್ತ ವಯಸ್ಕರ ಭಾಗಿ?: ಕೆಲವು ಅಪ್ರಾಪ್ತ ವಯಸ್ಕರನ್ನು ಹಿರಿಯ ಅಪರಾಧಿಗಳು ಹಿಂಸಾತಕ ಅಪರಾಧಗಳಿಗೆ ಸೆಳೆಯುತ್ತಾರೆ, ಇತರರು ವೇಗವಾಗಿ ಹೆಚ್ಚಾದ ವಿವಾದಗಳ ಸಮಯದಲ್ಲಿ ಹಠಾತ್ತನೆ ವರ್ತಿಸುತ್ತಾರೆ. ಅಸ್ತಿತ್ವದಲ್ಲಿರುವ ಬಾಲಾಪರಾಧಿ ನ್ಯಾಯ ಚೌಕಟ್ಟಿನ ಅಡಿಯಲ್ಲಿ ಅಪ್ರಾಪ್ತ ವಯಸ್ಕರು ವಯಸ್ಕ ಅಪರಾಧಿಗಳಂತೆಯೇ ಶಿಕ್ಷೆಯ ಕ್ರಮಗಳಿಗೆ ಒಳಗಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಇದು ಕೆಲವೊಮೆ ಅಪರಾಧಿಗಳು ವಯಸ್ಕರಿಗೆ ಹೋಲಿಸಿದರೆ ಕಡಿಮೆ ತೀವ್ರವಾದ ಕಾನೂನು ಪರಿಣಾಮಗಳನ್ನು ಎದುರಿಸುತ್ತಾರೆ ಎಂದು ತಿಳಿದುಕೊಂಡು ಅಪ್ರಾಪ್ತ ವಯಸ್ಕರನ್ನು ಒಳಗೊಳ್ಳಲು ಧೈರ್ಯ ತುಂಬುತ್ತದೆ. ಕಾನೂನು ಶಿಕ್ಷೆಗಿಂತ ಸುಧಾರಣೆಗೆ ಆದ್ಯತೆ ನೀಡುತ್ತದೆ ಎಂದು ಒತ್ತಿ ಹೇಳಿದ್ದಾರೆ.

ಯುವ ಮಾರ್ಗ

www.yuvamarga.com Yuva Marga yuva_marga_

## ಸೈಬರ್ ವಂಚನೆ: ಹಣ ಕಳೆದುಕೊಂಡವರ ಖಾತೆಗೆ 2.73 ಕೋಟಿ ರೂ.ಮರಳಿ ಜಮೆ

**ಕಲಬುರಗಿ,ಡಿ.17**–2025ನೇ ಸಾಲಿನಲ್ಲಿ ಸೈಬರ್ ವಂಚಕರ ಜಾಲಕ್ಕೆ ಸಿಲುಕಿ ಹಣ ಕಳೆದುಕೊಂಡವರ ಖಾತೆಗೆ 2,73,24,849 ರೂಪಾಯಿಗಳನ್ನು ಮರಳಿ ಜಮೆ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಪೊಲೀಸ್ ಆಯುಕ್ತಾಲಯ ವ್ಯಾಪ್ತಿಯ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದಾಖಲಾದ ಸೈಬರ್ ಅಪರಾಧ ಸಂಬಂಧಿತ ಪ್ರಕರಣಗಳ ಸೂಕ್ತ ತನಿಖೆಗೆ ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ್, ಸಿಸಿಬಿ ಘಟಕದ ಎಸಿಪಿ ಜೇಮ್ಸ್ ಮಿನೇಜಸ್ ಅವರ ಮಾರ್ಗದರ್ಶನದಲ್ಲಿ ಸೈಬರ್ ಕ್ರೈಮ್ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಸಂಜೀವಕುಮಾರ ಎನ್.ಕುಂಬಾರಗೇರೆ ಅವರ ನೇತೃತ್ವದಲ್ಲಿ ಎ.ಎಸ್.ಐ ದೇವಿಂದ್ರಪ್ಪಾ, ತನಿಖಾ ಸಹಾಯಕ ಸಿಬ್ಬಂದಿಗಳಾದ ಸುನೀಲಕುಮಾರ, ಈರಣ್ಣ, ಕುಶಾಲ್ ರಾಠೋಡ್, ತಾಂತ್ರಿಕ ಸಹಾಯಕ ಸಿಬ್ಬಂದಿಗಳಾದ ಪ್ರಶಾಂತ, ಸಂತೋಷ ಹಾಗೂ ಆನ್‌ಲೈನ್ ಪೋರ್ಟಲ್ ಸಹಾಯವಾಣಿ–1930 ಕರ್ತವ್ಯ ನಿರ್ವಹಣೆ ಸಿಬ್ಬಂದಿಗಳಾದ ಸುಜಾತ, ಅಂಬ್ರೇಶ, ವಿಠ್ಠಲ, ಅಪರಾಧ ದಳದ ಸಿಬ್ಬಂದಿಗಳಾದ ರಾಮು ಪವಾರ, ಹೊನ್ನುರ್ ಸಾಬ್, ಅಮರನಾಥ, ಶರಣಬಸಪ್ಪ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು. ಈ ತಂಡ ತನಿಖೆ ನಡೆಸಿ ವಿವಿಧ ಸೈಬರ್ ಅಪರಾಧಗಳ ಮೂಲಕ ಸೈಬರ್ ವಂಚಕರ ಜಾಲಕ್ಕೆ ಸಿಲುಕಿ 2025ನೇ ಸಾಲಿನಲ್ಲಿ ಕಳೆದುಕೊಂಡ/ಮೋಸಕ್ಕೊಳಗಾದ ಹಣ ಮತ್ತು ಸೈಬರ್ ಸಹಾಯವಾಣಿ 1930 ಪೋರ್ಟಲ್ ಮೂಲಕ ದಾಖಲಾದ ಒಟ್ಟು 2,211 ಪ್ರಕರಣಗಳಿಂದ ವಂಚನೆಗೆ ಒಳಗಾದ ಒಟ್ಟು 8.93 ಕೋಟಿ ಮೊತ್ತದಲ್ಲಿ ವಶಪಡಿಸಿಕೊಂಡ 96.82 ಲಕ್ಷ ಹಾಗೂ ಸೈಬರ್ ವಂಚನೆಗೊಳಗಾಗಿ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಒಟ್ಟು 40 ಪ್ರಕರಣಗಳಿಂದ ವಂಚನೆಗೊಳಗಾದ ಒಟ್ಟು 12.72 ಕೋಟಿ ಮೊತ್ತದಲ್ಲಿ ವಶಪಡಿಸಿಕೊಂಡ 1.76 ಕೋಟಿ ಸೇರಿ 2.73 ಕೋಟಿ ರೂಪಾಯಿಗಳನ್ನು ನೊಂದವರ ಖಾತೆಗೆ ಮರಳಿ ಜಮೆ ಮಾಡಲಾಗಿದೆ ಎಂದು ವಿವರಿಸಿದರು.ಅಲ್ಲದೆ ಇತ್ತೀಚೆಗೆ ದಾಖಲಾದ ಕೆಲವೊಂದು ಪ್ರಕರಣಗಳಲ್ಲಿ ವಂಚನೆಗೆ ಒಳಗಾದ ಸಾರ್ವಜನಿಕರು ಗೋಲ್ಡನ್ ಅವರದಲ್ಲಿ ಪ್ರಕರಣ ದಾಖಲಿಸಿದ್ದರಿಂದ ಶೇ.70 ರಿಂದ 85 ರಷ್ಟು ಹಣವನ್ನು ಆರೋಪಿತರ ಖಾತೆಯಿಂದ ವಂಚನೆಗೆ ಒಳಗಾದವರ ಖಾತೆಗೆ ಮರಳಿ ಜಮೆ ಮಾಡಲಾಗಿದೆ ಎಂದು ತಿಳಿಸಿದರು.

ಸೈಬರ್ ಅಪರಾಧಗಳನ್ನು ಬೇಧಿಸಿ ನೊಂದವರ ಖಾತೆಗಳಿಗೆ ಹಣ ಮರಳಿ ಜಮಾವಣೆ ಮಾಡುವಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿ ಅವರಿಗೆ ಅವರು ಪ್ರಶಂಸನಾ ಪತ್ರ ನೀಡಿ ಶ್ಲಾಘಿಸಿದರು.

## ಬೀದಿ ನಾಯಿಗಳ ಹಾವಳಿ ತಪ್ಪಿಸಲು ಅಗತ್ಯ ಕ್ರಮಕೈಗೊಳ್ಳಿ: ಜಿಲ್ಲಾಧಿಕಾರಿ ನಿತೀಶ್ ಕೆ.



ಯುವಮಾರ್ಗ ಸುದ್ದಿ

**ರಾಯಚೂರು,ಡಿ.17**–ಜಿಲ್ಲೆಯಲ್ಲಿ ಬೀದಿ ನಾಯಿಗಳ ಹಾವಳಿ ತಪ್ಪಿಸಲು ನಗರ ಸ್ಥಳೀಯ ಸಂಸ್ಥೆಗಳು ಅಗತ್ಯ ಕ್ರಮಕೈಗೊಳ್ಳಬೇಕು. ಸಾರ್ವಜನಿಕರಿಗೂ ಜಾಗೃತಿ ಮೂಡಿಸುವ ಕೆಲಸ ಮಾಡಬೇಕೆಂದು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಡಿಸೆಂಬರ್ 17ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಜಿಲ್ಲಾ ಪ್ರಾಣಿದಯಾ ಸಂಘದ ವತಿಯಿಂದ ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ, ರೇಬಿಸ್ ಲಸಿಕೆ ತಿಳುವಳಿಕೆ ಮೂಡಿಸುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಬೇಕು. ಅಲ್ಲದೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶದಲ್ಲಿನ ಅಂಶಗಳನ್ನು ಕೂಡಲೇ ಕ್ರಿಯಾಶೀಲರಾಗಿ ಸೂಕ್ತ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.ಸರ್ಕಾರಿ ಹಾಗೂ ಖಾಸಗಿ ಶೈಕ್ಷಣಿಕ ಸಂಸ್ಥೆಗಳು, ಜಿಲ್ಲಾ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯಕೀಯ ಕಾಲೇಜುಗಳು ಸೇರಿದಂತೆ ಸಾರ್ವಜನಿಕ ಕ್ರೀಡಾಂಗಣಗಳು ಅಥವಾ ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ಬಸ್ ಡಿಪೋಗಳು, ರೈಲು ನಿಲ್ದಾಣಗಳು ಇತ್ಯಾದಿ ಸಾರ್ವಜನಿಕ ಪ್ರದೇಶಗಳಲ್ಲಿ ಇರುವ ಎಲ್ಲಾ ಬೀದಿ ನಾಯಿಗಳನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಸೆರೆಹಿಡಿದು ಅವುಗಳ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಕ್ರಮ ಕೈಗೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆದಷ್ಟು ಬೇಗನೆ ಕಾರ್ಯಾಚರಣೆಯನ್ನು ಆರಂಭಿಸಬೇಕೆಂದರು.ನಾಯಿ ಹಿಡಿಯುವ ತಂಡವು ಸಂಬಂಧಪಟ್ಟ ಸಾರ್ವಜನಿಕ ಸಂಸ್ಥೆಗಳಿಗೆ ಭೇಟಿ ನೀಡುವ ದಿನಾಂಕ ಮತ್ತು ಸಮಯವನ್ನು ಮುಂಚಿತವಾಗಿ ತಿಳಿಸಬೇಕು. ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ಹಿಡಿದ ನಂತರ ಅವುಗಳಿಗೆ ಆಶ್ರಯ ನೀಡಲು ನಿಗದಿತ ಕಟ್ಟಡ ಸ್ಥಳಗಳಿಗೆ ಸ್ಥಳಾಂತರಿಸಬೇಕು. ಅಲ್ಲದೆ ರೇಬೀಸ್ ಪೀಡಿತ ನಾಯಿಗಳನ್ನು ಪ್ರತ್ಯೇಕ ಕಟ್ಟಡ ನಿರ್ವಹಣೆ ಮಾಡಬೇಕು. ಬೀದಿ ನಾಯಿಗಳನ್ನು ಸಂತಾನಹರಣ ಶಸ್ತ್ರಚಿಕಿತ್ಸೆಗೊಳಿಸುವ ಕುರಿತು. ಪ್ರಾಣಿ ಕಲ್ಯಾಣ ಮಂಡಳಿಯಿಂದ ಮಾನ್ಯತೆ ಪಡೆದ ಎನ್.ಜಿ.ಓ. ಗಳಲ್ಲದೇ ಹೆಚ್ಚಿನ ಸಂಸ್ಥೆಗಳಿಂದ ಪ್ರಸ್ತಾವನೆ ಪಡೆದು ನಿಯಮಾನುಸಾರ ಕ್ರಮವಹಿಸಬೇಕು ಎಂದರು.

## ಮಾನ್ವಿ ಪತ್ರಕರ್ತರ ಸಂಘಕ್ಕೆ ಅಧ್ಯಕ್ಷರಾಗಿ ಅಶೋಕ ತಡಕಲ್, ಪ್ರಧಾನ ಕಾರ್ಯದರ್ಶಿಯಾಗಿ ರವಿಕುಮಾರ್ ಆಯ್ಕೆ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.17**–ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಮಾನ್ವಿ ತಾಲೂಕು ಘಟಕಕ್ಕೆ ಅಧ್ಯಕ್ಷರಾಗಿ ಅಶೋಕ ತಡಕಲ್ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ರವಿಕುಮಾರ ಆಯ್ಕೆಯಾದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಂಗಳವಾರ ಸಂಜೆ ತಾಲೂಕು ಘಟಕಕ್ಕೆ ಚುನಾವಣೆ ಪ್ರಕ್ರಿಯೆ ನಡೆಸಲಾಯಿತು. ಉಪಾಧ್ಯಕ್ಷರಾಗಿ ದೇವಪ್ಪ ಬ್ಯಾಗವಾಟ್, ಗೂಳಪ್ಪ ನೀರಮಾನ್ವಿ, ಕಾರ್ಯದರ್ಶಿಯಾಗಿ ಅಜಯಕುಮಾರ್, ಖಜಾಂಚಿಯಾಗಿ ವಿಜಯಕುಮಾರ ಆಯ್ಕೆಯಾದರು. ಇನ್ನೂ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮಾರೆಪ್ಪ ದೊಡ್ಡಮನಿ, ಪಿ.ಪರಮೇಶ, ಕೃಷ್ಣಮೂರ್ತಿ ಗುಡಿ, ಈಶಪ್ಪ ಬೈಲ್ ಮರ್ಚೆಡ್, ಚಂದ್ರಶೇಖರ್ ಮದ್ಲಾಪುರ, ಆನಂದ ಸ್ವಾಮಿ, ಶಿವಕುಮಾರ್ ಜಗ್ಲಿ ಆಯ್ಕೆಯಾದರು. ಆಯ್ಕೆ ಪ್ರಕ್ರಿಯೆ ನಡೆದ ಬಳಿಕ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ ಫಲಿತಾಂಶ ಪ್ರಕಟಿಸಿ ವಿಜೇತರಿಗೆ ಪ್ರಮಾಣಪತ್ರ ವಿತರಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ಧಯ್ಯ ಸ್ವಾಮಿ ಕುಕನೂರು, ಜಿಲ್ಲಾ ಉಪಾಧ್ಯಕ್ಷರಾದ ಮಹಾನಂದ ನಾಯಕ, ಸೂಗುರೇಶ ಎಸ್. ಗುಡಿ, ಜಿಲ್ಲಾ ಕಾರ್ಯದರ್ಶಿ ಬಸವರಾಜ ಬೋಗಾವತಿ, ಜಿಲ್ಲಾ ಖಜಾಂಚಿ ಮಲ್ಲಿಕಾರ್ಜುನಯ್ಯ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಾದ ಲಕ್ಷ್ಮಿ ಪ್ರಸನ್ನ ಜೈನ್ , ಲಕ್ಷ್ಮಣ ಕಪಗಲ್, ತಾಯಪ್ಪ ಬಿ.ಹೊಸೂರು ಸೇರಿದಂತೆ ಅನೇಕರು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

# ಭೂಮನಗುಂಡ ಶ್ರೀಮಾರುತೇಶ್ವರ ಜಾತ್ರಾ ಮಹೋತ್ಸವ

ಯುವಮಾರ್ಗ ಸುದ್ದಿ

**ಅರಕೇರಾ,ಡಿ.17**–ತಾಲೂಕಿನ ಭೂಮನಗುಂಡ ಗ್ರಾಮದಲ್ಲಿನ ಶ್ರೀಮಾರುತೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಶ್ರೀವಿಜಯಾಭ್ಯುದಯಶ್ರೀ ಮನ್ನೃಪ ಶಾಲಿವಾಹನ ಶಕೆ 1947 ನೇ ವಿಶ್ವಾವಸುನಾಮ ಸಂವತ್ಸರ ಮಾರ್ಗಶಿರ ಶು॥ ಕಾರ್ಯಕ್ರಮಗಳು ದಿನಾಂಕ 19–12–2025ರಿಂದ 22–12–2025 ರವರಗೆ ಜಾತ್ರಾ ನಡೆಯಲಿದೆ.

ಶುಕ್ರವಾರ ಎಳ್ಳ ಅಮಾವಾಸ್ಯೆಯಿಂದ ಕಳಸಾರೋಹಣ ದೇವಸ್ಥಾನದಲ್ಲಿ ಬೆಳಿಗ್ಗೆ ಮಾರುತೇಶ್ವರ ಮೂರ್ತಿಗೆ ವಿಶೇಷಪೂಜೆ ಫಲಪುಷ್ಪಗಳಿಂದ ಅಲಂಕಾರಕಾರ್ಯಕ್ರಮ ಸದ್ಭಕ್ತರಿಂದ ಎಲೆಪೂಜೆ ಕಟ್ಟುವದು. ದಿನಾಂಕ 20–12–2025ರಂದು ಶಿನಿವಾರ ಬೆಳಿಗ್ಗೆ 9ಕ್ಕೆ ಗಂಗಾಸ್ಥಳಕ್ಕೆ ತೆರಳಿ ಉದಕವನ್ನು ತರಲಾಯಿತು. ನೈವೇದ್ಯದೊಂದಿಗೆ ಭಕ್ತರು ಹರಕೆಗಾಗಿ ಜ್ಯೋತಿ ಹೊರುವ ಹಾಗೂ ದೀರ್ಘ ದಂಡ ನಮಸ್ಕಾರ ಸಲ್ಲಿಸುವರು.ಸಂಜೆ 5ಗಂಟೆಗೆ ರಥೋತ್ಸವ ಕಾರ್ಯಕ್ರಮ ಜರಗುವದು.

ದಿನಾಂಕ. 21–12–2025ರಂದು ಭಾನುವಾರ ಮದ್ಯಾಹ್ನ 3ಗಂಟೆಯಿಂದ ಸಾಯಂಕಲಾ 5ಗಂಟೆಯವರಿಗೆ ಹಾಲುಗಂಬ ಉತ್ಸವಕಾರ್ಯಕ್ರಮ ಜರಗುವದು. ದಿನಾಂಕ23–12–2025 ರಂದು ಸೋಮವಾರ ದೇವಸ್ಥಾನದಿಂದ ಪಲ್ಲಕಿಯಲ್ಲಿ ಉತ್ಸವ ಮೂರ್ತಿಯನ್ನು ಮೇರವಣಿಗೆ ಮೂಲಕ ದೇವರಮನೆ ಹೋಗುವದು.ಜಾತ್ರಾಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀಮಾರುತೇಶ್ವರ ದೇವರ ಕೃಪಾಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಶ್ರೀಮಾರುತೇಶ್ವರ ದೇವಸ್ಥಾನದ ಸಮಿತಿಯವರು ಪ್ರತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಪೋಲಿಯೋ ಬೂತ್‌ಗಳ ಮಾಹಿತಿ ಪಡೆಯಿರಿ: ಜುಬಿನ್ ಮೊಹೊಪಾತ್ರ

ಯುವಮಾರ್ಗ ಸುದ್ದಿ

**ರಾಯಚೂರು,ಡಿ.17**–ಇಲ್ಲಿನ ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಐದು ವರ್ಷದ ಒಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ಹಾಕುವ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ನಗರದಾದ್ಯಂತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದ್ದು, ಪೋಲಿಯೋ ಬೂತ್ ಗಳ ಮಾಹಿತಿ ಪಡೆಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ತಮ್ಮ ಹತ್ತಿರದ ಬೂತ್ ವಿಳಾಸವನ್ನು ಪಡೆದು ಲಸಿಕೆ ಹಾಕಿಸಬೇಕೆಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹೊಪಾತ್ರ ಅವರು ಕೋರಿದ್ದಾರೆ. ನಗರದ ಯಾವುದೇ ಮಗು ಲಸಿಕೆಯಿಂದ ವಂಚಿತರಾಗದಂತೆ ಸಾರ್ವಜನಿಕರು ಕೈಜೋ ಡಿಸಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಯನ್ನಾಗಿಸಲು ಡಿಸೆಂಬರ್ – 21ರಂದು ಎಲ್ಲಾ ಸರಕಾರಿ ಆಸ್ಪತ್ರೆ ಬಸ್ ನಿಲ್ದಾಣ, ರೈಲು ನಿಲ್ದಾಣ, ಅಂಗನವಾಡಿ ಮತ್ತು ಶಾಲೆಗಳಲ್ಲಿ ಬೂತ್ ತೆರೆಯಲಾಗಿದೆ. ಬೂತ್ ಗಳ ಮಾಹಿತಿ ಯನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯ ಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


TQRCG

# ಹಂಪಿ ಉತ್ಸವ 2026 ಸಿದ್ದತೆ ಮಾಡಿಕೊಳ್ಳಿ : ಕವಿತಾ ಎಸ್.ಮನ್ನಿಕೇರಿ

**ಹೊಸಪೇಟೆ,ಡಿ.17**– ಪ್ರತಿ ವರ್ಷದಂತೆ 2026 ನೇ ಸಾಲಿನಲ್ಲಿ ಹಂಪಿ ಉತ್ಸವ ಏರ್ಪಡಿಸಲು ಅಗತ್ಯ ವಿರುವ ಸಿದ್ದತೆ ಮಾಡಿಕೊಳ್ಳಲು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ 2026 ರಲ್ಲಿ ಕೈಗೊಳ್ಳುವ ಹಂಪಿ ಉತ್ಸವ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಂಗಳವಾರ ಮಾತನಾಡಿ ಸರ್ಕಾರದ ಮಟ್ಟದಲ್ಲಿ ದಿನಾಂಕ ಇನ್ನೂ ನಿಗಧಿಯಾಗಬೇಕಿದೆ. ಆದ್ದರಿಂದ ದಿನಾಂಕ ನಿಗಧಿಯ ಪೂರ್ವದಿಂದಲೇ ಅಗತ್ಯವಿರುವ ಪೂರ್ವ ಸಿದ್ದತೆಯನ್ನು ಅಯಾ ಇಲಾಖೆ ಅಧಿಕಾರಿಗಳು ಮತ್ತು ಸಮಿತಿ ಕಾರ್ಯೋನ್ಮುಖರಾಗಬೇಕೆಂದು ತಿಳಿಸಿದರು.

ವಿನೂತನ ಉತ್ಸವ: ಇಲ್ಲಿಯವರೆಗೆ ಹಲವು ಹಂಪಿ ಉತ್ಸವಗಳಾಗಿವೆ. ಆದರೆ ಬರುವ ಉತ್ಸವದಲ್ಲಿ ಹಿಂದೆ ಆದಂತಹ ಕುಂದು ಕೊರತೆಗಳು, ಸಮಸ್ಯೆಗಳು ಮರುಕಳಿಸಬಾರದು, ಜೊತೆಗೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸುಧಾರಣೆಯ ಕ್ರಮವಾಗಿ ಉತ್ಸವ ಆಯೋಜಿಸಬೇಕಿದೆ. ಹಂಪಿ ವಿಶ್ವ ಪರಾಂಪರಿಕ ತಾಣವಾಗಿದ್ದು, ಹಂಪಿ ಕುರಿತಂತೆ ಹೆಚ್ಚಿನ ಪ್ರಚಾರ ಕೈಗೊಳ್ಳಲು ಉತ್ಸವ ಪೂರಕವಾಗುವ ನಿಟ್ಟಿನಲ್ಲಿ ಸ್ಥಳೀಯ ಕಲಾವಿದರ ಜೊತೆಗೆ ಆರ್ಕಷಣೀಯ ಕಲಾವಿದರಗಳನ್ನು ಒಳಗೊಂಡು ಸಾಂಸ್ಕೃತಿಕ ಕಾಯಕ್ರಮಗಳನ್ನು ಆಯೋಜಿಸುವ ಜೊತೆಗೆ ರೈತರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸು ವಂತಹ ವಸ್ತು ಪ್ರದರ್ಶನಗಳು, ಗ್ರಾಮೀಣ ಕಲೆಗಳು ಮತ್ತು ಕ್ರೀಡೆಗಳಿಗೂ ಒತ್ತು ನೀಡುವ ನಿಟ್ಟಿನಲ್ಲಿ ಎಲ್ಲರ ಸಲಹೆಗಳು ಮೂಡಿ ಬರಲಿ ಎಂದರು.



## ಡಿ.22ರಂದು ಸಿರಿಧಾನ್ಯಗಳ ಜಾಥಾ ಕಾರ್ಯಕ್ರಮ

**ರಾಯಚೂರು,ಡಿ.17**– ಇಲ್ಲಿನ ಕೃಷಿ ಇಲಾಖೆಯಿಂದ ಸಿರಿಧಾನ್ಯ, ಸಾವಯವ ಉತ್ಪನ್ನಗಳ ಕುರಿತು ಹಾಗೂ ಗ್ರಾಹಕರಿಗೆ ಜಾಗೃತಿ ಮೂಡಿಸಲು ಸಿರಿಧಾನ್ಯಗಳ ಜಾಥಾ ಕಾರ್ಯಕ್ರಮ–2025ರ ಡಿಸೆಂಬರ್ 22ರ ಬೆಳಿಗ್ಗೆ 6ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ಜಾಗೃತಿ ನಡಿಗೆಯಲ್ಲಿ ಎಲ್ಲರೂ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಕೋರಿದ್ದರೆ.

ಜಾಗೃತಿ ನಡಿಗೆವು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ ಸಭಾಂಗಣದ ಮುಂಭಾಗ ದಿಂದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬಸವೇಶ್ವರ ವೃತ್ತ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದವರೆಗೆ ಹಮ್ಮಿಕೊಳ್ಳಲಾಗಿದ್ದು, ಎಲ್ಲರೂ ಭಾಗವಹಿಸಿ ರೈತರಿಗೆ ಮತ್ತು ಗ್ರಾಹಕರಿಗೆ ಉತ್ತೇಜನ ನೀಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಪ್ರಟಕಣೆಯಲ್ಲಿ ತಿಳಿಸಿದ್ದಾರೆ.

## ಜಾತ್ರೆಗಳು ಸನಾತನ ಸಂಸ್ಕೃತಿ ಪ್ರತೀಕ



**ಬೀದರ್,ಡಿ.17**–ಜಾತ್ರೆಗಳು ಸನಾತನ ಧರ್ಮ, ಸಂಸ್ಕೃತಿಯ ಪ್ರತೀಕವಾಗಿವೆ ಎಂದು ಬೇಮಳಖೇಡದ ಡಾ. ರಾಜಶೇಖರ ಶಿವಾಚಾರ್ಯ ನುಡಿದರು.

ಬೀದರ್ ತಾಲ್ಲೂಕಿನ ಕಮಠಾಣ ಗ್ರಾಮದಲ್ಲಿ ಶರಭಾವತಾರ ವೀರಭದ್ರೇಶ್ವರ ಜಾತ್ರೆ ನಿಮಿತ್ತ ಸೋಮವಾರ ನಡೆದ ಮಹಾ ರಥೋತ್ಸವ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಆದಿ, ಅನಾದಿ ಕಾಲದಿಂದಲೂ ಜಾತ್ರೆಗಳು ವಿಶ್ವವಿಖ್ಯಾತ ಭಾರತದ ಸನಾತನ ಧರ್ಮವನ್ನು ಪೊ?ಷಿಸಿಕೊಂಡು ಬಂದಿವೆ ಎಂದು ಹೇಳಿದರು.

ಭಾರತದ ಸನಾತನ ಧರ್ಮ, ಸಂಸ್ಕೃತಿ ವಿಶ್ವದಲ್ಲಿಯೇ ಅತ್ಯಂತ ಪ್ರಾಚೀನವಾದದ್ದು. ಪ್ರಪಂಚದ ಇತರ ಭಾಗಗಳಲ್ಲಿ ಜ್ಞಾನದ ಬೆಳಕು ಇಲ್ಲದ ಸಂದರ್ಭದಲ್ಲಿ ಭಾರತ ಶಿಕ್ಷಣ, ಸಾಹಿತ್ಯ, ಆಧ್ಯಾತ್ಮ, ವಿಜ್ಞಾನ ಮುಂತಾದ ಹತ್ತು ಹಲವು ಸಂಸ್ಕೃತಿಗಳ ನೆಲೆಬೀಡಾಗಿ ಪ್ರಸಿದ್ಧಿ ಪಡೆದಿತ್ತು ಎಂದು ತಿಳಿಸಿದರು.

ಮಾನವನ ಇಹಿಕ ಜೀವನದ ಜತೆಗೆ ಪಾರಮಾರ್ಥದಿಂದ ಮೋಕ್ಷದ ಮಹಾ ಮಾರ್ಗದ ಸದ್ಬೋಧನೆ ಇಲ್ಲಿ ನಡೆಯುತ್ತಿತ್ತು ಎಂದು ಹೇಳಿದರು.

ಮಾತೃ ಶಕ್ತಿಯ ಗೌರವ ಹೆಚ್ಚಿಸುವುದಕ್ಕಾಗಿ ವೀರಭದ್ರೇಶ್ವರ ಅವತಾರ ಆಗಿದೆ ಎಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಶರಭಾವತಾರ ವೀರಭದ್ರೇಶ್ವರ ಚರಿತ್ರೆ, ಇತಿಹಾಸ ಅತ್ಯಂತ ಪ್ರೇರಣಾದಾಯಕವಾಗಿದೆ. ವೀರಭದ್ರೇಶ್ವರ ಕಮಠಾಣ ಗ್ರಾಮದೇವರಾಗಿ ನೆಲೆ ನಿಂತು, ಎಲ್ಲರ ಕಲ್ಯಾಣ ಮಾಡುತ್ತಿದ್ದಾನೆ ಎಂದು ಹೇಳಿದರು.

ಜಾತ್ರೆಯ ಮಹಾ ರಥೋತ್ಸವ 17 ವರ್ಷ ಪೂರೈಸಿರುವುದು ಸಂತೋಷ ಹಾಗೂ ಅಭಿಮಾನ ತಂದಿದೆ. ಜಾತ್ರಾ ಸಮಿತಿ ಹಾಗೂ ಭಕ್ತರ ಸಹಕಾರದಿಂದ ಜಾತ್ರೆ ದಿನದಿಂದ ದಿನಕ್ಕೆ ಬೆಳೆಯುತ್ತಾ ನಡೆದಿದೆ. ಜಿಲ್ಲೆಯ ಪ್ರಮುಖ ಜಾತ್ರೆಗಳಲ್ಲಿ ಒಂದಾಗಿ ಮನ್ನಣೆ ಪಡೆಯುತ್ತಿದೆ. ದೇವಸ್ಥಾನವೂ ಅಭಿವೃದ್ಧಿ ಹೊಂದುತ್ತಿದೆ ಎಂದು ತಿಳಿಸಿದರು.

ಪುಷ್ಪಾಲಂಕೃತ ರಥಕ್ಕೆ ಭಕ್ತರು ಬೆಂಡು, ಬತಾಸು, ಬಾಳೆ ಹಣ್ಣು ಎಸೆದರು. ಅನೇಕರು ಹರಕೆ ತೀರಿಸಿದರು. ವೀರಭದ್ರೇಶ್ವರ ಮಹಾರಾಜ ಕೀ ಜೈ ಎಂಬ ಘೋಷಣೆಗಳು ಮುಗಿಲು ಮುಟ್ಟಿದವು. ಅಪಾರ ಭಕ್ತರು ರಥೋತ್ಸವದಲ್ಲಿ ಭಾಗಿಯಾದರು.

ಶಿವರಾಜ ಪಾಟೀಲ ಅಯಾಸಪುರ, ಮಹೇಶ ಪಾಟೀಲ ಹಾಗೂ ಸಂತೋಷ್ ಪಾಟೀಲ ಅವರನ್ನು ಸನ್ಮಾನಿಸಲಾಯಿತು.

ಗವಿ ಮಠದ ರಾಚೋಟೇಶ್ವರ ಶಿವಾಚಾರ್ಯ ಸಮ್ಮುಖ ವಹಿಸಿದ್ದರು. ದಾಸೋಹಿ ಶಿವರಾಜ ಪಾಟೀಲ ಅಯಾಸಪುರ ಸಮಾರಂಭವನ್ನು ಉದ್ಘಾಟಿಸಿದರು.

ಜಾತ್ರೆ ಸಮಿತಿಯ ಅಧ್ಯಕ್ಷ ಕುಶಾಲರಾವ್ ಯಾಬಾ ಸ್ವಾಗತಿಸಿದರು. ಸಂಚಾಲಕ ಶಿವಯ್ಯ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ರಾಜ್ಯ ಕ್ರಿಕೆಟ್ ಸಂಸ್ಥೆಯ ಸದಸ್ಯ ಕುಶಾಲ್ ಪಾಟೀಲ ಗಾದಗಿ, ದೇವಸ್ಥಾನದ ಅಧ್ಯಕ್ಷ ರಾಜಕುಮಾರ ಯಾಬಾ, ಶಂಕರಯ್ಯ ಸ್ವಾಮಿ ಗಚ್ಚಿನಮಠ, ಮಲ್ಲಿಕಾರ್ಜುನ ಸ್ವಾಮಿ ಗಚ್ಚಿನಮಠ, ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ನಾಗಭೂಷಣ ಕಮಠಾಣೆ, ಎಪಿಎಂಸಿ ಸದಸ್ಯ ಶಾಂತಯ್ಯ ಸ್ವಾಮಿ, ಮುಖಂಡರಾದ ಪ್ರಭಣ್ಣ ಯಾಬಾ, ಮಾಣಿಕ ಯಾಬಾ, ಸತೀಶ್ ಯಾಬಾ, ಮಲ್ಲಿಕಾರ್ಜುನ ಔರಾದೆ, ಕಲ್ಯಾಣರಾವ್ ಯಾಬಾ, ಓಂಕಾರ ಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H